59

ಚುಟ್ಟ ಬಿಟ್ಟ ಧಿಟ್ಟ

(ಏಕಾಂಕ ಪ್ರಹಸನ)

•

ರಚಯಿತರು:

ಡಾ| ಎಸ್. ಪಿ. ಭಟ್,

ಮಂಗಳೂರು.

1955.

ಒಂದಾಣೆ ಮಾಲೆ

ಬಂದಾಣಿ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು.
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಪೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳು
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು
೪೫. ಸುಭಾಷಿತ
೪೬. ೧೮೫೭ರ "ಸಿಪಾಯಿ ದಂಗೆ" ಅಥವಾ ಬ್ರಿಟಿಷರಿಗೆದುರಾಗಿ ಭಾರತೀಯರ ಸ್ವಾತಂತ್ರ್ಯಸಮರ
೪೭. ಅಕಾಂಡ ತಾಂಡವ (ರೇಡಿಯೋನಾಟಕ)
೪೮. ಸಾಹಸದ ಕಥೆಗಳು
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟಿ ಬಿಟ್ಟಿ ಧಿಟ್ಟಿ (ಏಕಾಂಕ ಪ್ರಹಸನ)

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಐವತ್ತೊಂಬತ್ತು ಪುಸ್ತಕಗಳಲ್ಲಿ, ಐವತ್ತೊಂಬತ್ತು ಆಣೆಗಳಿಗೆ, 'ಬಂದಾಣಿ ಮಾಲೆ'ಯು, ಹೊದಿಕೆ ಕೂಡಿ, 1292 ಪುಟಗಳನ್ನು ಕೊಟ್ಟಿರುತ್ತದೆ.

ಬಿಟ್ಟೆ ಬಿಟ್ಟೆ ಧಿಟ್ಟೆ

(ಏಕಾಂಕ ಪ್ರಹಸನ)

ಪಾತ್ರಗಳು:

ಆನಂದ:	ತರುಣ ಚಿತ್ರಗಾರ.
ಶಾಂತೆ:	ಆನಂದನ ಪ್ರಣಯಿನಿ.
ದಾಮು:	ಶಾಂತೆಯ ಹಿರೇ ಅಣ್ಣ.
ಸೋಮು:	ಶಾಂತೆಯ ಕಿರೇ ಅಣ್ಣ.
ಭಾಗಮ್ಮ:	ಶಾಂತೆಯ ತಾಯಿ.
ಬಾಳು:	ಆನಂದನ ಆಳು.
ಬೀದಿ ಭಕ್ತ:	ದಾರಿಹೋಕ.

ದೃಶ್ಯ ೧: ಆನಂದನ ಕಲಾಗಾರ

ಆನಂದ [ಶತಪಥ ಅಲೆಯುತ್ತ ಸ್ವಗತ]: ಅಬ್ಬ! ಏನಾಗಿದೆ, ಈ ಹುಡುಗಿಗೆ? ಇದೀಗ ಸಾವಿರದೊಂದನೆಯ ಸಲ ಅವಳನ್ನು ಮದುವೆಗೆ ಒಪ್ಪಿಸಲು ಪ್ರಯತ್ನಿಸಿದೆನು; ಶಾಂತೆ ಸಾವಿರದ ಒಂದನೆಯ ಸಲವೂ ನನ್ನನ್ನು ನಿರಾಕರಿಸಿದಳು! ನಾನೇನೂ ಸಾಮಾನ್ಯ ಮನುಷ್ಯನಲ್ಲ—ಕೀರ್ತಿಬಾಲೆಯಿಂದ ಇದೀಗಲೇ ಎತ್ತಿ ಹಿಡಿಯಲ್ಪಟ್ಟ ತರುಣ ಚಿತ್ರಗಾರ! ಶಾಂತೆಯ ತಂದೆಯ ಮನೆ ನನ್ನ ಕಲಾಗಾರಕ್ಕೆ ಬಹು ಸಮೀಪವೆಂದೇ ನನಗೆ ಸ್ವಲ್ಪ ವಿರಾಮ ದೊರೆಯುತ್ತಲೇ ಅವರ ಮನೆಗೆ ತಟ್ಟನೆ ನೆಗೆದು ಶಾಂತೆಯನ್ನು ಮದುವೆಗೆ ಒಪ್ಪಿಸಲು ಪ್ರಯತ್ನಿಸುವುದೇ ನನ್ನ ನಿತ್ಯದ ದಿನಚರಿ; ನನ್ನನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುವುದೇ ಅವಳ ದಿನದಿನದ ರೂಢಿ! ಹೀಗಾಯಿತಲ್ಲ. [ಸಿಳ್ಳು ಹಾಕುತ್ತಾ ಯೋಚನಾಪರನಾಗಿ ಅತ್ತಿತ್ತ ಸುಳಿದಾಡುವನು; ಕಡೆಗೆ ಮೇಜಿನ ಮೇಲಿನ ಪೆಟ್ಟಿಗೆಯಿಂದ ಒಂದು ಚುಟ್ಟವನ್ನು ತೆಗೆದು ಬಾಯಿಗಿಟ್ಟುಕೊಂಡು ಹೊತ್ತಿಸಿ, ಕುರ್ಚಿಯಲ್ಲಿ ಕುಳಿತು, ಕಾಲುಗಳನ್ನು ಮೇಜಿನ ಮೇಲೆ ಚಾಚಿ, ಹೊಗೆಬಿಡುತ್ತಿರುವನು.] ನನ್ನನ್ನು ಅವಳ ಮನೆಯವರು ಅವಳ ವರನಾಗಿ ಆರಿಸಿರುವರಾದರೂ, ಇಷ್ಟೊಂದು ಉದ್ಧಟತನದಿಂದ ಪ್ರತಿಸಲವೂ ನಿರಾಕರಿಸುತ್ತಿರುವಳಲ್ಲ! ನನ್ನಲ್ಲಿ ಅವಳಿಗೆ ತಾತ್ಸಾರ ಉಂಟುಮಾಡುವಂತಹ ಯಾವ ಕುಂದು ಇರುವುದೋ, ಆಶ್ಚರ್ಯ! ಶಾಂತೆಯ ಉಪೇಕ್ಷೆಯ ಕಾರಣವು ನನ್ನ

ಉತ್ಪತ್ತಿಯಾಗಿರಲಿಕ್ಕಿಲ್ಲ,—ಅದು ತೃಪ್ತಿಕರವಾಗಿಯೇ ಇದೆ; ನನ್ನ ಗತಜೀವನವೂ ಅಗಿರಲಿಕ್ಕಿಲ್ಲ—ಅದು ನಿಷ್ಕಲಂಕವಾಗಿಯೇ ಇದೆ; ನನ್ನ ರೂಪವಂತೂ ಆಗಿರಲಿಕ್ಕೇ ಇಲ್ಲ,—ಅದು, ಸುಂದರರಾವಣನಂತೆ, ಮನೋಮೋಹಕವಾಗಿಯೇ ಇದೆ. ಅದೂ ಅಲ್ಲದೆ, ಅವಳ ಅಣ್ಣಂದಿರಾದ ನರಮೃಗವರ್ಗದ ಆ ದಾಮು, ಈ ಮಾಧು-ಇವರ ಸಂಗಡ ಬೆಳೆದಿರುವ ಶಾಂತೆ ಗಂಡಸರ ರೂಪಲಾವಣ್ಯದ ವಿಷಯದಲ್ಲಿ ಅಭಿಪ್ರಾಯ ಕೊಡಲು ಎಷ್ಟರ ಮಟ್ಟಿಗೆ ಶಕ್ತಳಾದಾಳು? ಆ ನರಪೇತಲ ದಾಮು ಇಂದ್ರಜಾಲದಿಂದ ಪ್ರಾಣ ಪಡೆದಿರುವ ಬೆರ್ಚಪ್ಪನೇ ಸೈ! ಅವನಿಗೆ ವಾರಪತ್ರಿಕೆಗಳಿಗೆ ಕಲಾವಿಮರ್ಶೆಗಳನ್ನು ಬರೆಯುತ್ತಿರುವ ಉದ್ಯೋಗವೊಂದು ಬೇರೆ! ಈ ಧಾಂಡಿಗ ಮಾಧು, ಅಂಗಾಂಗದಿಂದ ಬೊಜ್ಜು ಹೊರಹೊಮ್ಮುತ್ತಿರುವ ಪೆಡಂಭೂತನೇ ಸೈ! ಅವನಿಗೂ ಕೀರ ಚಿಕ್ಕಂದಿನಿಂದಲೇ, ಸ್ನೇಹಿತರಿಂದ ಸಣ್ಣ ಸಾಲಗಳನ್ನು ಎತ್ತಿ ಹಾಕುವ ಕಸಬೊಂದು ಬೇರೆ! [ಸ್ವಲ್ಪ ಸಮಯ ಯೋಚಿಸುತ್ತ ಕಳೆದು] ಇರಲಿ, ಶಾಂತೆಯ ಉಪೇಕ್ಷೆಯ ಕಾರಣವು ಯಾವುದೆಂದು ಇವರಿಬ್ಬರಲ್ಲಿ ಯಾವನಿಗಾದರೂ ತಿಳಿದಿರಬಹುದೇ? ಇದನ್ನು ಪರೀಕ್ಷಿಸಿ ನೋಡುವುದೇ ಉತ್ತಮ. ಮೊದಲು ದಾಮೂ ಬಳಿಗೆ ಹೋಗೋಣ. [ನಿಷ್ಕ್ರಮಣ.

ದೃಶ್ಯ ೨: ಬೀದಿ.

[ಆನಂದ ಮತ್ತು ದಾಮು ಎದುರುಬದುರಾಗಿ ಪ್ರವೇಶಿಸುವರು]

ಆನಂದ: ಸರಿಯಾಯಿತು! ಯಾರೋ ಒಬ್ಬನಿಗೆ, ಕಾಶಿಗೆಂದು ಹೋಗುವಾಗ ಭಾಗೀರಥಿಯೇ ಎದುರಿಗೆ ಬಂದಿದ್ದಳಂತೆ!—ಹಾಗಾಯಿತು ನನಗೆ, ಈ ಭಾಗೀರಥೀಪುತ್ರನ ದರ್ಶನ!

ದಾಮು: ಹೌದೇ? ಯಾಕೆ, ಏನಾಯಿತು?

ಆನಂದ: ದಾಮೂ, ನನಗೆ ನಿನ್ನೊಂದಿಗೆ ಸ್ವಲ್ಪ ರಹಸ್ಯವಾಗಿ ಮಾತಾಡಲಿದೆ.

ದಾಮು: ಸಾಗಲಿ, ನಿನ್ನ ಗೂಢ ಸಮಾಲೋಚನೆ ಇಲ್ಲಿ ಯಾರೂ ಕೇಳುವವರಿಲ್ಲವಷ್ಟೆ!

ಆನಂದ [ಬಹಳ ನಯವಾದ ಸ್ವರದಲ್ಲಿ]: ದಾಮೂ, ನಾನು ಶಾಂತೆಯನ್ನು ಪ್ರೇಮಿಸುತ್ತಿರುವೆ; ಬಲ್ಲೆಯಷ್ಟೆ?

ದಾಮು: ಅದು ನಿಮ್ಮನಿಮ್ಮೊಳಗಿನ ಪ್ರಸಂಗವಾಯಿತು. ಅದರಲ್ಲಿ ನನ್ನ ಪ್ರವೇಶವೇಕಯ್ಯ?

ಆನಂದ; ಅಲ್ಲ, ನಾನು ಅವಳನ್ನು ಮದುವೆಯಾಗಲಿಚ್ಛಿಸುತ್ತೇನೆ.

ದಾಮು: ಹಾಗಾದರೆ ಮದುವೆಯಾಗು! ಯಾಕಾಗದು?

ಆನಂದ: ಆದರೆ, ದಾಮೂ, ಅವಳು ಒಪ್ಪಬೇಕಲ್ಲ?

ದಾಮು: ಅವಳು ಒಪ್ಪೆನೆಂದಳೇ?

ಆನಂದ: ಹೌದು, ಮಹಾರಾಯ! ಸಾವಿರದ ಒಂದನೆಯ ಸಲವೂ ಒಪ್ಪೆನೆಂದಳು!

ದಾಮು [ಎಡ ಗಲ್ಲ ಮೀಸೆಯನ್ನು ಮಾಲೀಸುಮಾಡುತ್ತ]: ಒಬ್ಬನ ಅನುಭವವೇನೆಂದರೆ, ಒಟ್ಟಾರೆ ಹುಡುಗಿಗೆ ಒಬ್ಬನನ್ನು ಮದುವೆಯಾಗಲು ಮನಸ್ಸಿಲ್ಲ, ಅಲ್ಲವೇ?

ಆನಂದ: ಹೌದು, ಒಬ್ಬನ ಕ್ರೂರ ಅನುಭವವಾಗಿರುವುದು!

ದಾಮು: ಒಬ್ಬನು ತನ್ನ ಪ್ರಯತ್ನಗಳಲ್ಲಿ ಯಶಸ್ವಿಯಾಗುವುದಿಲ್ಲವೇಕೆಂದು ಒಬ್ಬನಿಗೆ ಆಶ್ಚರ್ಯವಾಗುವುದು, ಅಲ್ಲವೇ?

ಆನಂದ: ಹೌದು, ಒಬ್ಬನಿಗೆ ಮಹದಾಶ್ಚರ್ಯ!

ದಾಮು: ಒಬ್ಬನು ಇದರ ಕಾರಣವೇನೆಂದು ಕೇಳುವನು, ಅಲ್ಲವೇ?

ಆನಂದ: ಹೌದು, ಒಬ್ಬನು ತಿರುಗಿತಿರುಗಿ ಕೇಳುತ್ತಿದ್ದಾನೆ.

ದಾಮು: ಹಾಗಾದರೆ, ಕೇಳು. ನೀನು ಶಾಂತೆಗೆ ಮಾಧೂನನ್ನು ನೆನಪಿಗೆ ತರುವಿಯಂತೆ, ಅದಕ್ಕಾಗಿಯೇ ಅವಳು ನಿನ್ನನ್ನು ಉಪೇಕ್ಷಿಸುವಳಯ್ಯ!

ಆನಂದ [ಹೌಹಾರಿ, ಬಿದ್ದೆದ್ದು]: ಮಾಧೂನನ್ನು ನೆನಪಿಗೆ ತರುತ್ತೇನೆ!!!?

ದಾಮು: ಹೌದು, ಅವಳು ಹಾಗೇ ಹೇಳುವಳು.

ಆನಂದ: ಆದರೆ, ನಾನು ಅವನಂತೆ ಇಲ್ಲವೇ ಇಲ್ಲವಲ್ಲ! ಮಾಧೂವಿನಂತೆ ತೋರುವುದು ಮಾನವಸಾಧ್ಯವೇ ಅಲ್ಲ!

ದಾಮು: ಆದರೆ, ಒಬ್ಬನು ತಾನು ಕೇಳಿರುವುದನ್ನೇ ಹೇಳುವನು.

[ಆನಂದನು ಮಂಕು ಬಡಿದು, ತಬ್ಬಿಬ್ಬಾಗಿ, ತಪ್ಪುಹೆಜ್ಜೆ ಹಾಕುತ್ತ ನಿಷ್ಕ್ರಮಿಸುವನು.]

ದೃಶ್ಯ ೩: ಮೋಹನ ವಿಲಾಸ

[ಮಾಧು ಒಬ್ಬನೇ ಒಂದು ಮೇಜಿನ ಬಳಿ ಕುರ್ಚಿಯಲ್ಲಿ ಕುಳಿತು ಕಪ್ಪಿನಿಂದ ಕಾಫಿ ಹೀರುತ್ತಲಿರುವನು.]

ಆನಂದ [ಮಾಧೂವಿನ ಬಳಿಗೆ ಸಾರುತ್ತ]: ಎಲ! ಮಾಧು!

ಮಾಧು· ಏನೈ! ಏನೈ!

ಆನಂದ: ಸ್ವಲ್ಪ ಗಂಟಲು ಹಸೆಮಾಡೋಣ ಎಂದು ಬಂದೆ. ಆದರೆ, ಇದೆಂತಹ ಅದ್ಭುತ!

ಮಾಧು: ಯಾವುದು ಅದ್ಭುತ? ಏನೈ! ಏನೈ!

ಆನಂದ: ಅಲ್ಲ, ನಿನ್ನನ್ನೂ ಒಮ್ಮೆ ನೋಡಬೇಕೆಂದಿದ್ದೆ!

ಮಾಧು: ನೋಡಿದೆಯಲ್ಲ!

ಆನಂದ: ಅದೇ ಅದ್ಭುತವೆಂದೆ!

ಮಾಧು: ನನ್ನನ್ನು ಯಾಕೆ ನೋಡುವುದು? ಏನಾಯಿತು?

ಆನಂದ: ಅಲ್ಲ, ನಿನ್ನೊಡನೆ ಒಂದು ವಿಷಯ ಮಾತಾಡುವುದಿತ್ತು.

ಮಾಧು: ಮಾತಾಡು, ಯಾರು ಬೇಡವೆಂಬವರು!

ಆನಂದ [ಬಹಳ ಮೃದು ಸ್ವರದಿಂದ]: ಮಾಧೂ, ನಿನ್ನ ತಂಗಿ ನನ್ನಲ್ಲಿ ಅದೇಕೆ ಅಷ್ಟು ಉದಾಸೀನ ಮಾಡುವಳೆಂದು ಬಲ್ಲೆಯಾ?

ಮಾಧು: ಖಂಡಿತವಾಗಿ.

ಆನಂದ: ಹಾಗಾದರೆ, ಏಕೆಂದು ಹೇಳಲಾರಿಯಾ?

ಮಾಧು: ಏಕೆಂದು ಕೇಳುವಿಯಾ?

ಆನಂದ: ಹೌದು, ಕೇಳುವೆನು.

ಮಾಧು: ನಿನಗೆ ಕಾರಣ ತಿಳಿಯಬೇಕೇ?

ಆನಂದ: ಹೌದು, ತಿಳಿಯಬೇಕು.

ಮಾಧು: ಒಳ್ಳೆಯದು. ಹಾಗಾದರೆ, ಮೊತ್ತಮೊದಲಾಗಿ,—ನಿನಗೆ ಖಂಡಿತ ಮೇಲಿನ ಬುಧವಾರವೇ ಹಿಂದೆ ಕೊಡುತ್ತೇನೆ—ಒಂದು ಹತ್ತು ರೂಪಾಯಿ ಕಡ ಕೊಡುವಿಯಾ?

ಆನಂದ: ಇಲ್ಲ, ನನ್ನಿಂದಾಗದು.

ಮಾಧು: ಇಲ್ಲವೇ ಐದು ರೂಪಾಯಾದರೂ?

ಆನಂದ: ಐದು ರೂಪಾಯಿಯಾದರೂ ಇಲ್ಲ, ಐದು ಕಾಸಾದರೂ ಇಲ್ಲ. ದಯಮಾಡಿ ವಿಷಯಬಿಟ್ಟು ಅಲೆಯಬೇಡ. ಶಾಂತೆ ನನ್ನ ಕಡೆಗೆ ಯಾಕೆ ಕೃಪೆಯಿಂದ ನೋಡಲೊಲ್ಲಳು? ಹೇಳಲಾರಿಯಾ?

ಮಾಧು: ಇರಲಿ, ಹೇಳುವೆನು. ನೀನು ತುಚ್ಛನೂ ಲೋಭಿಯೂ ಆಗಿರುವಿ, ಅಲ್ಲದೆ, ಶಾಂತೆಗೆ ದಾಮೂನನ್ನು ನೆನಪಿಗೆ ತರುವಿಯಂತೆ!

ಆನಂದ [ದಂಗುಬಡಿದು, ತಲೆತಿರುಗಿ, ಕಣ್ಣು ಕತ್ತಲೆ ಬಂದು, ವಾಲಿ ಬೀಳುವಂತಾಗಿ ಹತ್ತಿರದ ಮೇಜನ್ನು ಅಧರಿಸಿ ನಿಂತು]: ದಾಮೂನನ್ನು ನೆನಪಿಗೆ ತರುವೆನೇ?

ಮಾಧು: ಹೌದು, ಅವಳು ಹಾಗೇ ಎನ್ನುವಳು.

[ಆನಂದನು ತಲೆ ಬಗ್ಗಿಸಿ, ಯೋಚನಾಪರವಶನಾಗಿ, ಎಡವುತ್ತ ತಡವುತ್ತ, ಮೆಲ್ಲ ಮೆಲ್ಲನೆ ನಿಷ್ಕ್ರಮಿಸುವನು.]

ದೃಶ್ಯ ೪: ಬೀದಿ

ಆನಂದ [ಸ್ವಗತ]: ಒಂದು ವೇಳೆ, ಪ್ರಕೃತಿಯ ಔದಾರ್ಯದಿಂದ, ಒಬ್ಬನು ಮಾಧೂನಂತಾಗುವುದು ಸಾಧ್ಯವೆಂದರೆ ನಂಬಬಹುದು; ಇಲ್ಲವೇ, ಕಾಲದ ದಾಳಿಯಿಂದ, ಅವನು ದಾಮೂನಂತಾದರೂ ಆಗುವುದು ಶಕ್ಯವೆಂದರೂ ಹಿಡಿದೀತು.

ಆದರೆ ಒಂದೇ ಕಾಲದಲ್ಲಿ ನಾನು ಇವರಿಬ್ಬರನ್ನೂ ಹೋಲುವುದೂ, ಅಂತೂ ಒದುತಿರುವುದೂ, ಹೇಗೆ ಸಂಭವನೀಯವಪ್ಪ? ಇರಲಿ, ಈ ಇಬ್ಬರೂ ಅಣ್ಣತಮ್ಮಂದಿರ ಗುಣವಿಶೇಷಣಗಳನ್ನು ಸಮಾಲೋಚಿಸೋಣ. [ಎಡಗೈ ಬೆರಳುಗಳನ್ನು ಬಲಗೈ ಬೆರಳಿಂದ ಒಂದೊಂದಾಗಿ ಮಡಚುತ್ತ] (೧) ದಾಮು—ಮುಖ ಒಂಟೆಯಂತೆ; ಮಾಧು—ಮುಖ ಹಂದಿಯಂತೆ. (೨) ದಾಮು—ಮುಖದಲ್ಲಿ ಗಲ್ಲಮೀಸೆಗಳು; ಮಾಧು—ಮುಖ ತುಂಬ ಮುದ್ದಣಗಳು. (೩) ದಾಮು_ಕಲಾವಿಮರ್ಶಕ; ಮಾಧು—ಅಚ್ಚ ಸುಲಿಗೆಗಾರ. (೪) ದಾಮು—'ಒಬ್ಬನ ಅನುಭವವೇನೆಂದರೆ,' ಎನ್ನುತ್ತಾನೆ; ಮಾಧು—''ಏನ್ನೈ! ಏನ್ನೈ!!' ಎನ್ನುತ್ತಾನೆ. (೫) ದಾಮು—ಮಿತಾಹಾರಿ; ಮಾಧು—ಶುದ್ಧ ತಿಂಡಿಪೋತ. (೬) ದಾಮು—ಹಾಡುತ್ತಾನೆ; ಮಾಧು-ವಿನೋದ ಕಥೆ ಹೇಳುತ್ತಾನೆ. (೭) ದಾಮು—ಕಡ್ಡಿಯಂತಹ ಕೈಗಳು; ಮಾಧು-ಆನೆಕಾಲಿನಂತಹ ಕೈಗಳು. ಇಬ್ಬರೊಳಗೆ ಹೋಲಿಕೆಯಿರುವ ಒಂದೇ ಒಂದಾದರೂ ಅಂಶ ಸೂಚಿಸದಲ್ಲ! [ತಲೆ ಕೆರೆದುಕೊಳ್ಳುತ್ತ ಥಕ್ಕನೆ] ಕಲಾಗಾರಕ್ಕೆ ಹೋಗಿ ಇವೆಲ್ಲದರ ಒಂದು ಪಟ್ಟಿ ತಯಾರಿಸಿ ಮತ್ತೆ ಯೋಚಿಸೋಣ! [ನಿಷ್ಕ್ರಮಣ

ದೃಶ್ಯ ೫: ಆನಂದನ ಕಲಾಗಾರ

ಆನಂದ [ಕೈಯಲ್ಲಿರುವ ಪಟ್ಟಿಯಿಂದ ದಾಮೂ ಮಾಧೂರವರ ಗುಣವಿಶೇಷಣಗಳನ್ನು ಉಚ್ಚರಿಸುತ್ತ ಓದಿ ಪಠಿಸುವನು, ಮತ್ತೆ ತಲೆಯನ್ನು ಕೈಯಲ್ಲಿರುವ ಲೇಖನಿಯಿಂದ ಕೆರೆಯುತ್ತ ಸ್ವಗತ]: ಇವರಿಬ್ಬರೊಳಗೆ ಹೋಲಿಕೆಯಿರುವ ಯಾವುದಾದರೂ ಅಂಶ ಇರುವುದೇ? ಹಾಂ! ಹೂಂ! ಓಃ! ತಿಳಿಯಿತು! [ಪಟ್ಟಿಯಲ್ಲಿ ಬರೆಯುತ್ತ] ದಾಮು—ಮಿತಿಮೀರಿ ಚುಟ್ಟ ಸೇದುತ್ತಾನೆ! ಮಾಧು_ಮಿತಿಮೀರಿ ಚುಟ್ಟ ಸೇದುತ್ತಾನೆ! ಕಡೆಗೂ ಇಬ್ಬರಲ್ಲಿಯೂ ಸಮಾನವಾಗಿರುವ ಒಂದು ಗುಣ ದೊರೆಯಿತಲ್ಲ! .... ಸಾಧ್ಯವೇ? .... ಆಗಿದ್ದಿರಬಹುದೇ? .... ಇನ್ನು ಸಂಶಯವೇ ಬೇಡ, ಆದರೆ ನನಗೆ ಚುಟ್ಟದ ಮೇಲಿನ ಪ್ರೀತಿ ಶಾಂತೆಯ ಮೇಲಿನ ಪ್ರೀತಿಗೆ ಸಮತೂಕವೇ ಎಂಬಂತಿರುವುದಲ್ಲ! ಇದೇನು, ನಿಜವಾಗಿಯೂ ನಾನು ಇವೆರಡರಲ್ಲಿ ಒಂದನ್ನು ಮಾತ್ರವೇ ಆರಿಸಬೇಕೆ?...... ......ಇಷ್ಟೊಂದು ದೊಡ್ಡ ಆತ್ಮಯಜ್ಞ ಮಾಡಬೇಕಾಗಿ ಬಂತೇ? [ಗೋಡೆಯ ಮೇಲಿಂದ ತನ್ನನ್ನೇ ದಿಟ್ಟಿಸುತಿದ್ದ ಶಾಂತೆಯ ಹಲವು ಹನ್ನೊಂದು ನಕ್ಷೆಗಳ ಕಡೆಗೆ ಸಿಳ್ಳುಹಾಕುತ್ತಾ ದೃಷ್ಟಿಹಾಯಿಸುತ್ತ] ಸರಿ, ಶಾಂತೆಯ ಮೋಹಕವಾದ ಮುಗುಳ್ನಗು ನನ್ನ ಸಂದೇಹವನ್ನೇ ನಿವಾರಿಸಿಬಿಡುತ್ತಿದೆ. ಇನ್ನು ಮನಸ್ಸನ್ನು ಗಟ್ಟಿಮಾಡೋಣ. [ಸ್ವರವೆತ್ತಿ ಕರೆಯುವನು] ಬಾಳೂ, ಓ ಬಾಳೂ!

ಬಾಳು [ಎಡದಲ್ಲಿರುವ ಒಳಬಾಗಿಲಿನಿಂದ ಓಡಿಬರುತ್ತ]: ಬಂದೆ ರಾಯರೇ! ಏನಪ್ಪಣೆ?

ಆನಂದ [ಮೇಜಿನ ಮೇಲಿದ್ದ ಚುಟ್ಟದ ಪೆಟ್ಟಿಗೆಯನ್ನು ತೆಗೆದುಕೊಡುತ್ತ]: ಇಗೋ, ನಿನಗೆ ಒಂದು ತಾಜಾ ಇನಾಮು!

ಬಾಳು [ಪೆಟ್ಟಿಗೆ ತೆಗೆದುಕೊಳ್ಳುತ್ತ]: ನಮಸ್ಕಾರ, ಬಹಳ ಉಪಕಾರವಾಯಿತು, ರಾಯರೇ! [ನಿಷ್ಕ್ರಮಿಸುತ್ತ, ಸಭೆಯನ್ನು ಉದ್ದೇಶಿಸಿ[ಯಾವನೋ ಒಬ್ಬನು ಅತ್ತೆಯನ್ನು ಮಾವನಿಗೆ ದಾನಮಾಡಿದ್ದನಂತೆ! ನನಗೂ ಈ ರಾಯರ ಈ ಇನಾಮು ಅಷ್ಟೇ ತಾಜಾ! ಹ ಹ್ಹ ಹ್ಹ!

[ಎಡಬಾಗಿಲಿನ ಮೂಲಕ ನಿಷ್ಕ್ರಮಣ.

ದೃಶ್ಯ ೬: ಬೀದಿ

(ಕೆಲವರು ಬೀಡಿ, ಸಿಗರೇಟ್, ಚುಟ್ಟ ಇತ್ಯಾದಿಗಳನ್ನು ಸೇದುತ್ತ ಸಂಚರಿಸುತ್ತಿರುವರು.)

ಆನಂದ (ಸಿಳ್ಳು ಹಾಕುತ್ತ, ಬೀದಿಹೋಕರ ಕಡೆಗೆ ಜುಗುಪ್ಸೆಯಿಂದ ನೋಡುತ್ತ, ಸ್ವಗತ): ಆಃ! ಮೂರ್ಖರು! ಶುದ್ಧ ಮುಟ್ಠಾಳರು! (ಬೀಡಿ ಸೇದುತ್ತ ಬರುವ ಒಬ್ಬ ದಾರಿಗನನ್ನು ಕುರಿತು) ಒಹೊಯ್, ಹೌದಯ್ಯ! ನಿನಗೆ ಧೂಮಪಾನದಿಂದಾಗುವ ಹಾನಿದೋಷಗಳ ವಿಷಯವಾಗಿ ಒಂದಿಷ್ಟೂ ತಿಳಿಯದೇ?

ಬೀಡಿ ಭಕ್ತ: ಯಾರಯ್ಯ ನೀನು? ಒಬ್ಬ ದೊಡ್ಡ ಮಹಾತ್ಮನಂತೆ ನನಗೆ ಬೋಧಿಸುವವನು?

ಆನಂದ: ನಿಜವಾಗಿಯೂ ಒಬ್ಬ ದೊಡ್ಡ ಮಹಾತ್ಮನೇ ಎನ್ನು!

ಬೀಡಿಭಕ್ತ: ಹೌದೇ? ಸ್ವರ್ಗಲೋಕದಿಂದಲೇ ನೆಟ್ಟಗೆ ಇಳಿದು ಬಂದವನೇ?

ಆನಂದ: ಧೂಮಪಾನದಂತಹ ದುರಭ್ಯಾಸಗಳಲ್ಲಿ ಹೊರಳುವವರ ನರಕದಿಂದ ಮುಕ್ತನಾಗಿ ಅವುಗಳನ್ನು ಜಯಿಸಿದ ಪರಾಕ್ರಮಿಗಳು ಮೆರೆಯುವ ಸ್ವರ್ಗಲೋಕವನ್ನು ಹೊಂದಿದವನಾದುದರಿಂದ ಹಾಗೂ ಎನ್ನಲು ಅಡ್ಡಿಯೇನು?

ಬೀಡಿಭಕ್ತ: ಹಾಗಾದರೆ ಮತ್ತೇಕೆ ಪುನಃ ಈ ನರಕಕ್ಕೆ ಬಂದಿರುವಿ?

ಆನಂದ: ನಿನ್ನಂತಹ ಪಾಪಿಗಳನ್ನು ನೋಡುವಾಗ ತಾತ್ಸಾರ ಹುಟ್ಟುತ್ತಿದೆ; ಆದರೂ ನೀವು ಅರಿಯದೆ ಈ ನರಕದಲ್ಲಿ ನರಳುತ್ತಿರುವಿರಿ! ಆದುದರಿಂದ ನಿಮಗಾಗಿ ನನ್ನಲ್ಲಿ ಸಹಾನುಭೂತಿ ಉಂಟಾಗುತ್ತಿದೆ. ನಿಮ್ಮಲ್ಲಿ ಬೋಧನೆಯಿಂದ ಸರಿಯಾದ ಅರಿವು ಹುಟ್ಟಿಸಿ, ನಿಮ್ಮನ್ನು ಉದ್ಧರಿಸಬೇಕೆಂಬುದೇ ನನ್ನ ಈಗಿನ ಉದ್ದೇಶ! ಈ ದುಶ್ಚಟವನ್ನು ಈಗಲೇ ಬಿಟ್ಟುಬಿಡಯ್ಯ! ಅದರಿಂದ ನಿನಗೆ ಎಂತಹ ಅಸೌಖ್ಯದ ಅನುಭವವೂ ಆಗಲಾರದು; ಅಲ್ಲದೆ, ಒಂದು ತರಹ ಪಾರಮಾರ್ಥಿಕ ಗರ್ವದಿಂದ ಉತ್ತೇಜನ ಹೊಂದುವಿ, ನೋಡು!

ಬೀಡಿಭಕ್ತ: ಒಹೊ? ಯಾರಿಗೆ ಬೇಕಯ್ಯ, ನಿನ್ನ ಪಾರಮಾರ್ಥಿಕ ಗರ್ವ?

ಆನಂದ: ಅಷ್ಟೇ ಅಲ್ಲ; ಹೊಗೆಸೊಪ್ಪಿನ ಹೊಗೆಯಲ್ಲಿ ಸೇಕಡಾ ಎಂಟಂಶ 'ಕಾರ್ಬನ್ ಮೊನೊಕ್ಸಾಯ್ಡ್' ಎಂಬ ಅನಿಲ ಇದೆ, ಗೊತ್ತೆ?

ಬೀಡಿಭಕ್ತ: ಇದ್ದರೇನು? (ಹೊಗೆಯ ದಮ್ಮು ಬಿಡುತ್ತ ಕೆಮ್ಮುವನು.)

ಆನಂದ: ಅದು ವಿಷವಯ್ಯ, ಘೋರ ವಿಷ! ಪ್ರಾಣಕ್ಕೆ ಅಪಾಯಕರ! ನೋಡು, ನಿನ್ನ ಈ ಕೆಮ್ಮು ಅದರ ಫಲವೇ ಆಗಿರುವುದು! ಅಲ್ಲದೆ, ಧೂಮಪಾನ ದಿಂದ ಕ್ರಮೇಣ ಅರ್ಬುದ, ಎಂದರೆ 'ಕೆನ್ಸರ್' ಎನ್ನುವರಲ್ಲ, ಆ ಮಹಾ ವ್ಯಾಧಿ ಕೂಡ ಉಂಟಾಗಬಹುದೆಂಬುದು ಇತ್ತೀಚೆಯ ತಜ್ಞರ ಅಭಿಪ್ರಾಯ! ತಿಳಿಯಿತೇ? ಇನ್ನಾದರೂ ಈ ಪೋಲಿ ಬೀಡಿಯನ್ನು ಬಿಡಯ್ಯ!

ಬೀಡಿಭಕ್ತ: ಅದೆಲ್ಲ ಸರಿ, ಆದರೆ ನಾನು ಈ ಬೀಡಿಯನ್ನು ಬಿಡುವುದು ಒಂದೇ ಸಲ!

ಆನಂದ (ಅತಿ ವಿನಯದಿಂದ): ಹಾಗೇಕೆ ಎನ್ನುವಿ? ಮನಸ್ಸನ್ನು ಮಾತ್ರ ಗಟ್ಟಿಮಾಡು. ಅತ್ಯಲ್ಪ ಮನೋಬಲದ ಮೂಲಕ ಈ ಚಟವನ್ನು ಒಂದೇ ಒಂದು ಕ್ಷಣದಲ್ಲಿ ಬಿಟ್ಟು ಬಿಡಬಹುದು. ಧೈರ್ಯಮಾಡಿ ಈಗಲೇ ಬಿಟ್ಟುಬಿಡು ಆ ಸುಟ್ಟ ಬೀಡಿಯನ್ನು!

ಬೀಡಿಭಕ್ತ: ಇರಲಿ! ಇಗೋ ಈಗಲೇ, ಈ ಕ್ಷಣವೇ ಬಿಟ್ಟುಬಿಟ್ಟೆ. (ಸೇದಿ ಮುಗಿದ ಬೀಡಿಯ ತುಂಡನ್ನು ಬಿಸಾಡಿ ನಗುವನು)

ಆನಂದ (ಬೀಡಿ ಭಕ್ತನ ಬೆನ್ನು ತಟ್ಟುತ್ತ): ಭಲಾ! ನೀನೇ ಈಗ ಮಹಾ ತ್ಯಾಗಿ! ಮಹಾ ವಿರಾಗಿ! ನೀನಿನ್ನು ಅಗಲಾರೆ ರೋಗಿ! ಧನ್ಯ! ಧನ್ಯ! ಪವಿತ್ರ ಭಾರತಮಾತೆಯ ಸತ್ಪುತ್ರ! ಜೈ!

ಬೀಡಿಭಕ್ತ: ಇನ್ನೊಂದು ಬೀಡಿ ಹಚ್ಚುವ ವರೆಗೆ ಹಾಗೇ ಸೈ!

(ಸಿಳ್ಳುಹಾಕುತ್ತ ನಿಷ್ಕ್ರಮಣ.)

ದೃಶ್ಯ ೭: ಆನಂದನ ಕೆಲಾಗಾರ

ಆನಂದ (ಸಿಳ್ಳುಹಾಕುತ್ತ ಶತಪಥ ಅಲೆಯುತ್ತ): ಬಾಳೂ, ನಿನ್ನ ಊಟ ವಾಯಿತೇ?

ಬಾಳು (ಆನಂದನು ಉಂಡುಬಿಟ್ಟ ಪ್ಲೇಟ್, ಕಪ್ ಮುಂತಾದುವನ್ನು ಎತ್ತುತ್ತ): ತಮ್ಮ ಊಟ ಈಗತಾನೇ ಮುಗಿಯಿತಷ್ಟೆ! ಇಷ್ಟರಲ್ಲೇ ಹೇಗೆ ನನ್ನ ಊಟವಾಗುವುದು, ರಾಯರೇ?

ಆನಂದ: ಹೌದು, ಹೌದು! ಮರೆತೆ! ನನ್ನ ಮನಸ್ಸು ಚಂಚಲವಾಗಿ ಎಲ್ಲೆಲ್ಲಿಯೊ ಅಲೆಯುತ್ತಿದೆಯಪ್ಪ!

ಬಾಳು: ಅದನ್ನು ಚಲಿಸದಂತೆ ಮಾಡಲು ಏನಾದರೂ ತರಬೇಕೇ?

ಆನಂದ: ಬೇಡ, ಬೇಡ! ಏನೂ ಬೇಡ. ಆದರೂ ಏನೋ ಒಂದು ತರದ ಮನಸ್ಸಿನ ಕ್ಷೋಭೆಯು ನನ್ನನ್ನು ಹಿಡಿಸುತ್ತಿದೆಯಲ್ಲ!

ಬಾಳು: ಹಾಗಾದರೆ, ಎಲ್ಲಿಯಾದರೂ ತಿರುಗಾಡಿಕೊಂಡು ಬರಬಾರದೇಕೆ? ಸಿನೆಮಗಿನೆಮ ...?

ಆನಂದ: ಛೆ! ಬೇಡ, ಬೇಡ! ಒಂದೂ ಬೇಡ!

ಬಾಳು: ಹಾಗಾದರೆ, ಏನಾದರೂ ಕೆಲಸಗಿಲಸ...?

ಆನಂದ: ಸಾಯಲಿ! ಕೆಲಸಗಿಲಸ! ಮನಸ್ಸು ಹೀಗೆ ಅಸ್ವಸ್ಥವಾಗಿರುವಾಗ ಎಂತಹ ಕೆಲಸ ಸಾಧ್ಯವಿದೆ? ನನಗೆ ಜೀವನವೇ ನಿಸ್ಸಾರವಾಗಿ ತೋರುತ್ತಿದೆ! ಆದರೂ, ಏನೋ ಒಂದು ಕೆಲಸ ಬಾಕಿ ಉಳಿದಿದ್ದಂತೆ ಭಾಸವಾಗುತ್ತಿದೆಯಪ್ಪ!

ಬಾಳು: ಚೆನ್ನಾಗಿ ಆಲೋಚಿಸಿ ನೋಡಿ, ಧಣಿಯರೇ. ಆಗ ಏನೆಂತ ನೆನಪಾದೀತು! [ನಿಷ್ಕ್ರಮಿಸುತ್ತ, ಸಭೆಯನ್ನು ಉದ್ದೇಶಿಸಿ] ಹೌದು, ಬಾಕಿಯಿದೆ, ಚುಟ್ಟಿ ಸೇದುವ ಕೆಲಸ! ಇವರು ನಿನ್ನೆಯಿಂದ ಪಡುತ್ತಿರುವ ಪಾಡು ನಾಯಿಗೂ ಬೇಡ. ಆದರೂ ಬಾಯಿಬಿಟ್ಟು ಹೇಳಲು ಸಂಕೋಚ! ನನಗೆ ಕೈಯೆತ್ತಿ ಕೊಟ್ಟ ಚುಟ್ಟದ ಪೆಟ್ಟಿಗೆಯನ್ನು ನಾನು ಹಿಂದೆ ಕೊಟ್ಟರಾಗಬಹುದೆಂದಿದೆಯೋ ಏನೋ! ನಾನು ಕೊಡುವ ಮಗನೇ? (ಎಡಬಾಗಿಲಿನ ಮೂಲಕ ನಿಷ್ಕ್ರಮಣ)

ಆನಂದ (ಸ್ವಲ್ಪ ಸಮಯ ಸಿಳ್ಳುಹಾಕುತ್ತ ಶತಪಥ ಅಲೆದಾಡಿ, ಬಳಿಕ): ಹಾ! ಭಯಂಕರ! ಈ ಯಾತನೆ ಏನುಮಾಡಿದರೂ ಕುಗ್ಗದಲ್ಲ, ಜಗ್ಗದಲ್ಲ! ಇದರ ಕಾರಣವೇನಿರಬಹುದು?—ಆಃ! ಸರಿ, ತಿಳಿಯಿತು! ನಾನು ಪ್ರಪಂಚದಲ್ಲಿ ಸಾಕಷ್ಟು ಒಳ್ಳೆಯದನ್ನು ಮಾಡಿಲ್ಲ! ಇದರಿಂದಲೇ ಹೀಗಾಗಿದ್ದಿರಬೇಕು. ಇದು ಖಂಡಿತ. ಹಾಗಾದರೆ ಇನ್ನಾದರೂ ನಾನೇಕೆ ಉದಾರಹೃದಯದಿಂದ ದಾನಧರ್ಮಗಳನ್ನು ಮಾಡಬಾರದು? ಸರಿ. ಏನೇನೆಲ್ಲ ಮಾಡಬರುವುದೋ, ಏನೇನೆಲ್ಲ ಮಾಡಲು ಹಿಂಜರಿದಿದ್ದೆನೋ ಅದನ್ನೆಲ್ಲ ಈಗಿನಿಂದಲೇ ಮಾಡುತ್ತೇನೆ.

(ಬಲಗಡೆಯಲ್ಲಿರುವ ಹೊರಬಾಗಿಲಿನ ಮೂಲಕ ಸಿಳ್ಳುಹಾಕುತ್ತ ನಿಷ್ಕ್ರಮಣ)

ದೃಶ್ಯ ೮: ಬೀದಿ

ಆನಂದ (ಮುಂದಿನಿಂದ ಹೋಗುವವನನ್ನು ಉದ್ದೇಶಿಸಿ): ದಾಮೂ ಗೆಳೆಯಾ!

ದಾಮು (ಹಿಂದಿರುಗಿ ನೋಡಿ ತಿರುಗಿ ನಿಂತು): ಎಲ! ಇದೇನಿದು? ಒಬ್ಬನು ಈಗತಾನೇ ನಮ್ಮ ಮನೆಯಿಂದ ಬಂದಂತೆ ತೋರುವುದು, ಸರಿಯೇ?

ಆನಂದ: ಸರಿ, ಸರಿ! ಸತ್ಯವಾದುದನ್ನೇ ಹೇಳಿದೆ.

ದಾಮು: ಸಾವಿರದ ಎರಡನೆಯ ಸಲಕ್ಕೇ?

ಆನಂದ: ಇಲ್ಲ, ಮಹಾರಾಯ! ಭಾಗಮ್ಮನು ಶಾಂತೆಯ ತೈಲಚಿತ್ರ ವೊಂದನ್ನು ಬರೆಯಬೇಕೆಂದಿದ್ದಳು, ಮರೆತೆಯಾ?

ದಾಮು: ಒಬ್ಬನಿಗೆ ಬರೆಯುವ 'ಒರ್ಡರ್' ಸಿಕ್ಕಿತೇ?

ಆನಂದ: ನಾನೇ, ನನ್ನ ಸ್ವಂತ ಖುಷಿಯಿಂದ, ಬರೆಯುವೆನೆಂದೆ. ಅದಕ್ಕಾಗಿ ನಾಳೆ ಅವರನ್ನು ಬರಲು ಹೇಳುವುದಕ್ಕಾಗಿಯೇ ನಾನು ಹೋದದ್ದು.

ದಾಮು: ಪುಕ್ಕಟೆಯಾದರೆ ಮಾತ್ರ ಬರೆಯಿಸುವ ಆಲೋಚನೆ ಅಮ್ಮನದಿತ್ತು. ಈಗ ಹಣ ಬಿಚ್ಚಲು ಒಪ್ಪಿದರೇ?

ಆನಂದ: ಶಾಂತೆಯಂತಹ ಅಪ್ಸರೆಯ ಚಿತ್ರ ಬರೆಯುವುದೇ ಒಂದು ಆನಂದ! ಹಾಗಿರುವಾಗ ಅದರಲ್ಲಿ ಹಣದ ಮಾತಿಗೆ ಅವಕಾಶವೆಲ್ಲಿದೆ, ಮಹಾರಾಯ?

ದಾಮು: ನಿನಗೆ ಯಾರ ಕೆಲಸವನ್ನೂ ಧರ್ಮಾರ್ಥ ಮಾಡುವುದೆಂದರೆ ಸಂಕಟ! ಆದರೆ, ಈ ಚಿತ್ರವನ್ನು ಬಿಡಿಸಬೇಕೆಂಬ ಲವಲವಿಕೆ ಹೇಗೆ ಉಂಟಾಯಿತೋ!

ಆನಂದ: ಈ ಪ್ರಪಂಚದಲ್ಲಿ, ಇದ್ದಾಗಲೇ ದಾನಧರ್ಮ ಮಾಡೆಂದು ದಾಸರು ಬೋಧಿಸಿಲ್ಲವೇ? ಅದಿರಲಿ, ನಿನ್ನೊಡನೆ ನನ್ನದೊಂದು ಬಯಕೆಯಿದೆ.

ದಾಮು: ಒಬ್ಬನು ಏನನ್ನು ಬಯಸುವನು?

ಆನಂದ: ಒಬ್ಬನು ಬಯಸುವನೇನೆಂದರೆ, ನಾಳೆ ಬೆಳಿಗ್ಗೆ ನೀನು ಒಬ್ಬನ ಕಲಾಗಾರದಲ್ಲಿ ಬಂದಿಣಿಕಿ, ಒಬ್ಬನ ಸ್ಪರ್ಧಾಚಿತ್ರವನ್ನು ನೋಡಿ, ಅದನ್ನು ಕುರಿತು ಒಬ್ಬನಿಗೆ ಒಂದೆರಡು ಸಲಹೆಗಳನ್ನು ಕೊಡಲಾರೆಯಾ?

ದಾಮು: ಏನು! ಒಬ್ಬನು ನಿಜವಾಗಿಯೂ ಬಯಸುವನೇ?

ಆನಂದ: ಹೌದು, ಒಬ್ಬನು ನಿಜವಾಗಿಯೂ ಬಯಸುವನು.

ದಾಮು: ಹಾಗಾದರೆ ಒಬ್ಬನು ನಾಳೆ ಬೆಳಿಗ್ಗೆ ಹನ್ನೊಂದು ಘಂಟೆಗೆ ತಪ್ಪದೆ ಹಾಜರಾಗುವನು.

(ದಾಮು ಹಿಂದಕ್ಕೆ ತಿರುಗಿ ನಿಷ್ಕ್ರಮಿಸುವನು. ಆನಂದನು ಸಿಳ್ಳುಹಾಕುತ್ತ ಎದುರುದಿಕ್ಕಿಗೆ ತಿರುಗಿ ಹೆಜ್ಜೆಹಾಕುವಾಗ ಆನೆಯ ಮರಿಯಂತೆ ದೃಢವಾದ ಹೆಜ್ಜೆಯಿಡುತ್ತ ಸಿಳ್ಳುಹಾಕುತ್ತ ಬರುವ ಮಾಧೂನಿಗೆ ಢಿಕ್ಕಿಬಡಿಯುವನು.)

ಮಾಧು: ಏನ್ಯೆ! ಏನ್ಯೆ!

ಆನಂದ (ಸಾವರಿಸಿಕೊಳ್ಳುತ್ತ): ಎಲ, ಎಲ, ಮಾಧು! ನಾನು ನಿನ್ನನ್ನೇ ಹುಡುಕುತ್ತಿದ್ದೆ.

ಮಾಧು: ಏನ್ಯೆ, ಏನ್ಯೆ, ಯಾಕೆ, ಏನಾಯಿತು?

ಆನಂದ (ಮೃದುಸ್ವರದಲ್ಲಿ): ಮಾಧೂ, ಮಿತ್ರಾ! ನಿನಗೆ ಸಾಕಷ್ಟು ಹಣ ದೊರೆಯಿತೋ ಇಲ್ಲವೆಂಬ ಚಿಂತೆಯಿಂದ ನನಗೆ ನಿನ್ನೆ ರಾತ್ರಿಯೆಲ್ಲಾ ನಿದ್ದೆಬರಲಿಲ್ಲ. ನೀನು ಆರ್ಥಿಕಸಂಕಷ್ಟದಲ್ಲಿ ಬಿದ್ದಿರಬಹುದೆಂಬ ಭಯವು ನನ್ನ ಎದೆಯನ್ನು ಚೂರಿಯಂತೆ ಇರಿಯಿತು. ಬಂದು, ನಿನಗೆ ಬೇಕಾದಷ್ಟು ತೆಗೆದುಕೊಂಡು ಹೋಗು.

ಮಾಧು (ಕಣ್ಣು ಕಿವಿಗಳನ್ನು ಸವರಿಕೊಳ್ಳುತ್ತ): ಇದೇನು, ನಾನು ಕನಸು ಕಾಣುತ್ತಿರುವೆನೇ? ನನ್ನ ಕಿವಿಗಳು ಕೆಟ್ಟವೆಯೋ?

ಆನಂದ: ಇಲ್ಲ, ಇದು ಕನಸಲ್ಲ; ನಿನ್ನ ಕಿವಿಗಳು ನೆಟ್ಟಗೇ ಇವೆ.

ಮಾಧು: ನನಗೆ ನಂಬಲು ಅಸಾಧ್ಯವಾಗಿ ತೋರುವುದು. ನೀನು ಹಣ ಕೊಡುವ ಭರವಸೆ ಕೊಡುತ್ತಿರುವಂತೆ ಕೇಳಿದಂತಾಯಿತು.

ಆನಂದ: ಮಾಧೂ, ನಿಜವಾಗಿಯೂ ಭರವಸೆ ಕೊಟ್ಟೆ.

ಮಾಧು: ಹೌದೇ? ನಿಶ್ಚಯವಾಗಿಯೂ, ನಾನಾಗಿ ಬೇಡದೆಯೇ,—ಖಂಡಿತ ವಾಗಿ ನಾಡದು ಶುಕ್ರವಾರದ ವರೆಗೆ—ಸ್ವಲ್ಪಹಣ ಕಡವಾಗಿ ಕೊಡುವೆನೆಂದಿಯಾ?

ಆನಂದ: ಹೌದು, ಎಂದೆನು.

ಮಾಧು: ಕಲಿಯುಗದಲ್ಲಿ ಪವಾಡಗಳು ಸಂಭವಿಸುವುದಿಲ್ಲವೆನ್ನುವುದು ತಪ್ಪು. ಇರಲಿ, ಎಷ್ಟರ ಮಟ್ಟಿಗೆಕೊಡಬಲ್ಲೆ, ಹತ್ತು ರೂಪಾಯಿಯೇ?

ಆನಂದ: ಮಾಧೂ, ಹತ್ತುರೂಪಾಯೆಂದರೆ ಎಷ್ಟು ಸ್ವಲ್ಪ!

ಮಾಧು: ಹದಿನೈದೇ?

ಆನಂದ: ಅದೇಕೆ ಸಂಕೋಚ? ಮುಕ್ತಹೃದಯನಾಗಿ ಕೇಳು.

ಮಾಧು: ಇಪ್ಪತ್ತು ರೂಪಾಯಲ್ಲವಷ್ಟೆ?

ಆನಂದ: ನಾನು ಇಪ್ಪತ್ತೈದು ರೂಪಾಯೆನ್ನುವುದರಲ್ಲಿದ್ದೆ.

ಮಾಧು: ಏನೈ!

ಆನಂದ: ಅಷ್ಟರಿಂದ ಸುಧಾರಿಸಿಕೊಳ್ಳಬಹುದೇ? ನಿನಗೆ ಖರ್ಚು ವಿಪರೀತ ಇರುವುದೆಂದು ಬಲ್ಲೆ.

ಮಾಧು: ಏನೈ!

ಆನಂದ: ಒಳ್ಳೆಯದು. ನಾಳೆ ಬೆಳಿಗ್ಗೆ ನನ್ನ ಕಲಾಗಾರಕ್ಕೆ ಬಂದುಬಿಡು. (ಮಾಧೂನಿಗೆ ಬೆನ್ನುಮಾಡಿ ನಿಷ್ಕ್ರಮಿಸುತ್ತ ಸ್ವಗತ): ಈಗಲಾದರೆ ಮಹತ್ಕಾರ್ಯಗಳನ್ನು ಸಾಧಿಸಿದಷ್ಟು ಆತ್ಮಸಂತುಷ್ಟಿಯಾಗುತ್ತಿದೆ.

(ಸಿಳ್ಳುಹಾಕುತ್ತ ನಿಷ್ಕ್ರಮಣ.)

ದೃಶ್ಯ ೯: ಆನಂದನ ಕಲಾಗಾರ

ಆನಂದ (ಹಾಸಿಗೆಯಲ್ಲಿ ಹೊರಳಾಡುತ್ತ): ಏನು ಮಂಡೆಮಾರಿ ಇದು, ಆಗಿನಿಂದ ಕರಕರೆ ಮಾಡುತ್ತಿದೆ? ಹಾಂ, ಈ ಸೊಟ್ಟಮುಸುಡಿನ ಪುಸ್ಸಿಯೇ? (ಎತ್ತಿದ ಸ್ವರದಲ್ಲಿ) ಬಾಳೂ ....(ಎಡಗಡೆಯ ಬಾಗಿಲು ಥಕ್ಕನೆ ತೆರೆಯುವುದು. ಬಾಳು ನೀರಿನ ಕಪ್ಪನ್ನು ಹಿಡಿದುಕೊಂಡು ಪ್ರವೇಶಿಸುವನು.)

ಆನಂದ (ಆಕಸ್ಮಾತ್ತಾಗಿ ಬೆಚ್ಚಿಬಿದ್ದು): ಅಬ್ಬಬ್ಬ! (ಎನ್ನುತ್ತ ಹೌಹಾರಿ, ಮಂಕುಬಡಿದು, ಹೊದ್ದುಕೊಂಡ ವಲ್ಲಿಯ ಸುರುಳಿಯೊಂದಿಗೇ ಸಟಕ್ಕನೆ ಎದ್ದು, ನಡುಗುತ್ತ ಧಡಮ್ಮನೆ ಹಾಸಿಗೆಯ ಮೇಲೆ ಬೀಳುವನು. ಅವನ ಹೃದ

ಯಕೋಶವು ಗಂಟಲಿಗೆ ಬಂದಂತಿರುವುದು; ಕಣ್ಣಾಲಿಗಳು ಅಂತರಾಳಕ್ಕೆ ಹೋಗಿಬಿಟ್ಟಿರುವುವು.) ಬೊ.........ಬೊ...............ಬೊಙಂಬು ಸಿಡಿಯಿತೇ? ಇನ್ನೆಷ್ಟು ಮಂದಿ ನನ್ನಂತೆ ನುಚ್ಚುನೂರಾಗದೆ ಬದುಕಿರುವರೊ. (ಅತ್ತಿತ್ತ ನೋಡುತ್ತ ಮುಂದಿರುವ ಬಾಳೂನನ್ನು ಕಂಡು) ಥೂ! ನಿನ್ನ ಪ್ರೇತವೇ? ಕರ್ಮ! ಬಡಿದು ಎಚ್ಚರಿಸದೆ ಬಾಗಿಲು ನೂಕಬಾರದೆಂದು ನಿನಗೆ ಎಷ್ಟು ಸಲ ಹೇಳಲಿ!

ಬಾಳು: ನಿಮಗೆ ಮುಖಕ್ಷೌರಕ್ಕಾಗಿ ನೀರು ತೆಗೆದುಕೊಂಡು ಬಂದಿದ್ದೆ.

ಆನಂದ: ಖಬರ್‌ದಾರ್! ನಡಿ, ಹೊರಗೆ, ಸುಮ್ಮನೆ ಜೀವ ಹಿಂಡಬೇಡ.

(ಕಪ್ಪನ್ನು ಮೇಜಿನ ಮೇಲಿರಿಸಿ, ಎಡಬಾಗಿಲಿನ ಮೂಲಕ ನಿಷ್ಕ್ರಮಣ.)

ಆನಂದ: ನನ್ನಬುದ್ಧಿ ನನ್ನನ್ನು ವಂಚಿಸಿ ಎಲ್ಲಿಗೆ ಹೋಗುತ್ತಿದೆ? ಒಮ್ಮೆ ಚೆನ್ನಾಗಿ ಅಳಲೇ ಎಂದೆನಿಸುವುದಲ್ಲ! ಆದರೆ, ಆಗದು, ಅಳುವುದು ಪುರುಷಲಕ್ಷಣವಲ್ಲ.

(ಎದ್ದು ಬದಿಯ ಕೋಣೆಗೆ ಹೋಗಿ ನಿತ್ಯಕರ್ಮಗಳನ್ನು ಮುಗಿಸಿ ಐದು ನಿಮಿಷಗಳಲ್ಲಿ ಹಿಂದೆಬರುವನು. ಸಿಳ್ಳುಹಾಕುತ್ತಾ ಮುಖಕ್ಷೌರ ಮುಗಿಸುವಷ್ಟರಲ್ಲಿ ಬಾಳು ಫಲಾಹಾರ ತಂದಿಡುವನು. ಅದನ್ನು ತೀರಿಸುತ್ತಲೇ ಆನಂದನ ಕೈ ಮೇಜಿನ ಮೇಲೆ ಚುಟ್ಟದ ಪೆಟ್ಟಿಗೆ ಇರುತ್ತಿದ್ದಲ್ಲಿ ಹೋಗುವುದು.)

ಆನಂದ (ಕೈಯನ್ನು ಥಕ್ಕನೆ ಹಿಂದೆ ಸರಿಸಿಕೊಂಡು): ಥುತ್! ಎಂತಹ ಕೆಟ್ಟ ದುರಭ್ಯಾಸ! ಮನಸ್ಸನ್ನು ಗಟ್ಟಿಮಾಡಿದರೂ ಕೈ ತಾನಾಗಿ ಮುಂದುವರಿಯುವುದಲ್ಲ! ಥೂ! ನರಕ, ನರಕ! (ಸ್ವಲ್ಪ ಸಮಯ ಮುಖವನ್ನು ಕೈಬೊಗಸೆಯಿಂದ ಮುಚ್ಚಿ ಸುಮ್ಮನೆ ಕುಳಿತುಕೊಳ್ಳುವನು; ಬಳಿಕ) ಪ್ರಪಂಚವೇ ಮಹಾ ನರಕ! ಇಲ್ಲಿ ಎಂತೆಂತಹಯಾತನೆಗಳು ನನ್ನನ್ನು ಕಾಡುತ್ತಿವೆ! ಎಲೈ ಮಾನವಕೋಟಿಯೇ! ನಿನ್ನನ್ನು ನಾನು ದ್ವೇಷಿಸುತ್ತೇನೆ! ಸೃಷ್ಟಿಯೇ, ನನಗೆ ಎಂತಹ ಜುಗುಪ್ಸೆ ಹುಟ್ಟಿಸುತ್ತಿರುವಿ! ಎಲ್ಲಿ ಹೋಯಿತು, ■ ಮಾರಿ ಬೆಳ್ಕು? ಇನ್ನೊಮ್ಮೆ ಅದಿಲ್ಲಿ ಬರಲಿ,—ಅದನ್ನು ಕಾಲಿಂದ ಒದ್ದು ನಜ್ಜುಗುಜ್ಜು ಮಾಡಿಬಿಡುತ್ತೇನೆ, ನೋಡು! ಆ ಮೂಳ ಬಾಳು ಎಲ್ಲಿ ಹೋದ? ಇನ್ನೊಮ್ಮೆ ಅವನಿಲ್ಲಿ ಬರಲಿ,—ಅವನ ಮಂಡೆಯನ್ನು ದೊಣ್ಣೆಯಿಂದ ಬಡಿದು ಚೂರುಚೂರು ಮಾಡುತ್ತೇನೆ, ನೋಡು!

ದಾಮು (ಕೊಠಡಿಯ ಬಲಗಡೆಯ ಹೊರಬಾಗಿಲು ತೆರೆದು ತನ್ನ ಒಂಟಿ ಮೊಗದಿಂದ ಒಳಗೆ ಇಣಕುತ್ತ): ಒಬ್ಬನು ಒಳಗೆ ಬರಬಹುದೇ?

ಆನಂದ: ನೆಟ್ಟಗೆ ಒಳಗೆ ಬಾ! (ಮೇಜಿನ ಡ್ರೊವರಿನಲ್ಲಿದ್ದ ಒಂದು ಜೂಪಾದ ಚೂರಿಯನ್ನು ಕೈಯಲ್ಲೆತ್ತಿ, ಧಾರೆಯನ್ನು ಪರೀಕ್ಷಿಸತೊಡಗುವನು.)

ದಾಮು (ಪ್ರವೇಶಿಸಿ ಆನಂದನ ಕಡೆಗೆ ಬೆನ್ನುಮಾಡಿನಿಂತು ಅವನ ಸ್ಪರ್ಧಾ ಚಿತ್ರವನ್ನು ಭೂತಗನ್ನಡಿಯ ಮೂಲಕ ಅವಲೋಕಿಸುತ್ತ): ಹಾಽಽಽಂ, ಹೂಽಽಽಂ, ಚಿಂತೆಯಿಲ್ಲ. ಚಿತ್ರದಲ್ಲಿ ಛಂದೋಬದ್ಧತೆ ಉಂಟು; ರೇಖಾಗುಣವೂ ಸಾಧಾರಣ್ಣ ಮಟ್ಟಿಗೆ ಇದೆ. ಆದರೂ ಒಬ್ಬನು ಇದನ್ನು ಮೆಚ್ಚಲಾಪನೇ?

ಆನಂದ (ಚೂರಿಯನ್ನು ಅಂಗೈಯ ಮೇಲೆ ಮಸೆಯುತ್ತ): ಮೆಚ್ಚಲಾರನೇ?

ದಾಮು (ಗಲ್ಲಮೀಸೆ ತೀಡುತ್ತ): ಇಲ್ಲ. ಒಬ್ಬನಿಗೆ ತಪ್ಪದೆ ಅನುಭವಕ್ಕೆ ಬರುವುದೇನೆಂದರೆ, ಚಿತ್ರದಲ್ಲಿ ಜೀವವೇ ಕಾಣುವುದಿಲ್ಲ!

ಆನಂದ: ಹೌದೇ?

ದಾಮು (ಕಣ್ಣನ್ನು ಅರೆಮುಚ್ಚುತ್ತಲೂ, ತೆರೆಯುತ್ತಲೂ, ಹಿಂದೆ ಹೋಗುತ್ತಲೂ, ಮುಂದೆ ಬರುತ್ತಲೂ ಚಿತ್ರವನ್ನು ದಿಟ್ಟಿಸುತ್ತ): ನಿರ್ವಿವಾದವಾಗಿ ಈ ಚಿತ್ರದಲ್ಲಿ ಒಬ್ಬನಿಗೆ ನಿರ್ಜೀವತೆಯೇ ಅನುಭವಕ್ಕೆ ಬರುತ್ತಿದೆ. ಚಿತ್ರದಲ್ಲಿ ಜೀವವನ್ನು ಎಂದೂ ಬಲಿಕೊಡಬಾರದು. ಸಂಗೀತಗಾರನು ರಾಗಗಳನ್ನು ನುಡಿಸುವಂತೆ, ಚಿತ್ರಗಾರನು ಬಣ್ಣಗಳನ್ನು ಬಳಿಯಬೇಕು. ಹೀಗೆ ಮಾಡಿದರೆ ಮಾತ್ರ ಚಿತ್ರವು ಸಜೀವವಾಗುತ್ತದೆ. ಈ ಚಿತ್ರದಲ್ಲಾದರೋ..................(ಥಕ್ಕನೆ ತಿರುಗುತ್ತಾನೆ. ಆನಂದನು ಹಲ್ಲು ಕಿರಿದು, ಕೈಯಲ್ಲಿ ಚೂರಿ ಹಿಡಿದು ತನ್ನ ಮೇಲೆ ಬೀಳಲು ಬರುತ್ತಿರುವುದು ಕಂಡುಬರುತ್ತದೆ. ಕ್ಷಣಾರ್ಧದಲ್ಲಿ ಎತ್ತರವಾದ ಆ ಚಿತ್ರದ ಹಿಂಭಾಗಕ್ಕೆ ಓಡುವನು. ಇಬ್ಬರೂ ಕೆಲವು ನಿಮಿಷಗಳ ವರೆಗೆ ಆ ಚಿತ್ರದ ಸುತ್ತಲೂ ಓಡಾಡುವಾಗ ಆನಂದನ ಕಾಲು ಚಾಪೆಯ ಮೇಲೆ ಜಾರುವುದು. ದಾಮು ಹತ್ತಿರದಲ್ಲಿರುವ ಒಂದು ಕಪಾಟನ್ನು ಹೊಕ್ಕು ಬಾಗಿಲು ಎಳೆದುಕೊಳ್ಳುತ್ತಾನೆ. ಇಬ್ಬರೂ ಸ್ವಲ್ಪ ಸಮಯ ಕಪಾಟನ ಬಾಗಿಲಿನೊಡನೆ ಹೆಣಗಾಡುತ್ತಾರೆ. ಕಟ್ಟಕಡೆಗೆ ಆನಂದನು ನಿರಾಶನಾಗಿ ಈಚೆಗೆ ಬಂದು ಸಿಳ್ಳುಹಾಕುತ್ತಾ ಕೊಠಡಿಯ ಉದ್ದಳತೆಯನ್ನು ಹೆಜ್ಜೆಗಳಿಂದ ಅಳೆಯತೊಡಗುತ್ತಾನೆ. ಸ್ವಲ್ಪ ಸಮಯದಲ್ಲಿ ಇನ್ನೊಮ್ಮೆ ಕೊಠಡಿಯ ಹೊರಬಾಗಿಲು ತೆರೆದುಕೊಳ್ಳುವುದು. ಮಾಧು ಪ್ರವೇಶಿಸುವನು.)

ಮಾಧು: ಏನ್ಸೈ!

ಆನಂದ (ಮುಂದೆಬರುತ್ತ): ಆಃ!

ಮಾಧು: ಇದೇನೆನ್ನುವಿ—‘ಆಃ!’?

ಆನಂದ: ‘ಆಃ!’—ಇಷ್ಟೆ.

ಮಾಧು: ನಾನು ಆ ಹಣಕ್ಕಾಗಿ ಬಂದೆ.

ಆನಂದ: ಆಃ!

ಮಾಧು: ಆ ಐವತ್ತು ರೂಪಾಯೋ, ಎಷ್ಟೋ, ನೀನು ಕೊಡುವೆನೆಂದು ಉದಾರ ಹೃದಯದಿಂದ ಮಾತುಕೊಟ್ಟಿದ್ದೆಯಷ್ಟೆ? ಇವತ್ತು ಬೆಳಿಗ್ಗೆ ಹಾಸಿಗೆಯಲ್ಲಿ ಮಲಗಿದ್ದು ಯೋಚಿಸುವಾಗ, ಅದನ್ನು ನೂರು ರೂಪಾಯಾಗಿ ಯಾಕೆ ಮಾಡಬಾರದೆಂದು ನನಗೆ ಹೊಳೆಯಿತು. ಆಗ ಒಂದು ಪೂರ್ಣಸಂಖ್ಯೆಯೇ ಆಗುತ್ತದೆ.

ಆನಂದ: ಆಃ!

ಮಾಧು: ಕೇಳಿದ್ದಕ್ಕೆಲ್ಲಾ ನೀನು ‘ಆಃ!’ ಎನ್ನುವಿ. ಇದೇಕೆ ಹೀಗಾಗಿರುವಿ?

ಆನಂದ (ಬುಸುಗುಟ್ಟುತ್ತಾ ಉರಿದುಬಿದ್ದು): ಇದು ನನ್ನ ಕಲಾಗಾರ. ಬೇಕಾದಷ್ಟು ಸಲ ‘ಆಃ!’ ಎನ್ನುವೆನು. ನನ್ನನ್ನು ಯಾರು ಕೇಳುವರು?

ಮಾಧು: ಅದು ಸರಿ, ಅದು ಸರಿ! ಹೌದ್ದೈ, ಹೌದ್ದೈ! ಅದು ಸರಿ! (ಮುಖ ಬೆವರುತ್ತಿರಲು ಕರವಸ್ತ್ರದಿಂದ ಗಾಳಿ ಹಾಕಿಕೊಳ್ಳತೊಡಗುವನು; ಆಗ ಅದು ಹಾರಿ ಕೆಳಗೆ ಬೀಳುವುದು. ಅದನ್ನು ಎತ್ತಿಕೊಳ್ಳಲು ಬಾಗಿದಾಗ, ಆನಂದನು ಅವನನ್ನು ಹಿಂದೆ ಒದೆಯುವನು: ಮಾಧು ಕೊಠಡಿಯಿಂದ ಹಾರಿ, ಮಾಯವಾಗುವನು. ಆಗಲೇ ಭಾಗಮ್ಮ, ಶಾಂತೆಯರು ಹೊರಬಾಗಿಲಿನಿಂದ ಪ್ರವೇಶಿಸುವರು)

ಭಾಗಮ್ಮ: ಅದೇನೇ, ಶಾಂತೂ, ನಾವು ಮೆಟ್ಟಿಲು ಹತ್ತುತ್ತಿದ್ದಂತೆಯೇ ಏನೋ ರೊಯ್ಯನೆ ಮೇಲಿಂದ ಕೆಳಕ್ಕೆ ಬೀಸಿ ಹೋಯಿತು?

ಶಾಂತೆ: ಒಂದು ಭಾರವಾದ ವಸ್ತುವಿನಂತೆ ಭಾಸವಾಯಿತಪ್ಪ!

ಆನಂದ (ಸಿಳ್ಳುಹಾಕುತ್ತ ಎಡಗಾಲಿನ ಮೇಲೆ ನಿಂತಿದ್ದು ಬಲಗಾಲಿನ ಬೆರಳುಗಳನ್ನು ಸವರಿಕೊಳ್ಳುತ್ತಿದ್ದಂತೆಯೇ, ಅಭ್ಯಾಗತರನ್ನು ಆದರಿಸುವ ಬದಲಿಗೆ ತಾತ್ಸಾರ ಪ್ರದರ್ಶಿಸುತ್ತ ಅವರನ್ನೇ ದಿಟ್ಟಿಸುತ್ತಿದ್ದು ಕಡೆಗೆ ಶಾಂತೆಯ ಕಡೆಗೆ ದೃಷ್ಟಿ ಹಾಯಿಸಿ, ಸ್ವಗತ): ಆಃ! ನನಗೆ ಎಂತಹ ಹುಚ್ಚು! ನಾನು ಈ ಬಣ್ಣದ ಬೀಸಣಿಗೆಯಿಂದ ಹೇಗೆ ಆಕರ್ಷಿಸಲ್ಪಟ್ಟಿದ್ದೆನೋ!

ಭಾಗಮ್ಮ (ಆನಂದನನ್ನು ಉದ್ದೇಶಿಸಿ): ನಾವು ಬಂದುದು ಸರಿಯಾಯಿತಷ್ಟೆ?

(ಕಪಾಟಿನ ಬಾಗಿಲು ನಿಶ್ಶಬ್ದವಾಗಿ ತೆರೆದುಕೊಂಡು ಒಂದು ವಿವರ್ಣವಾದ ಮುಖವು ಹೊರಗೆ ಇಣಿಕಿನೋಡುವುದು. ಮರುಕ್ಷಣದಲ್ಲಿ ಕೊಠಡಿಯೊಳಗಿಂದ ಗಾಳಿಯು ಬೀಸಿದಂತೆ ದಾಮು ಪಾರಾಗಿ ಹೋಗುವನು. ಹೊರ ಮೆಟ್ಟಲುಗಳನ್ನು ಮೂರುಮೂರರಂತೆ ಇಳಿದುಹೋದ ಶಬ್ದವಾಗುವುದು)

ಭಾಗಮ್ಮ: ಅದೇನದು?

ಶಾಂತೆ: ಸ್ವಲ್ಪ ಮಸುಕಾಗಿ ಕಂಡಿತು, ಆದರೆ ದಾಮೂ ಅಣ್ಣನೋ ಅಂತ!

ಆನಂದ (ನಿರಾಶೆಯಿಂದ): ಆಹಾ! (ಎಂದು ಮೆಟ್ಟಲ ಕಡೆಗೆ ಓಡುವನು. ಒಡನೆ ಹಿಂದೆ ಬಂದು) ಜಾರಿಯೇ ಬಿಟ್ಟನಲ್ಲ!

ಶಾಂತೆ (ತಾಯಿಯೊಡನೆ): ಇದೇನು, ಇವರಿಗೆ ಭ್ರಮೆ ಹಿಡಿದಿದೆಯೇ?

ಭಾಗಮ್ಮ (ಮಗಳೊಡನೆ): ಹೇಗೋ ನಿನ್ನ ಚಿತ್ರಕ್ಕೆ ಚಿಕ್ಕಾಸು ಕೊಡುವ ಅಗತ್ಯವಿಲ್ಲವಲ್ಲ!—ಅವರಿಗೆ ಭ್ರಮೆ ಹಿಡಿದರೇನು, ಬಿಟ್ಟರೇನು? (ಆನಂದನನ್ನು ಉದ್ದೇಶಿಸಿ) ಅದಿರಲಿ. ಶಾಂತೆಗೆ ಈ ದಿನ ಬೆಳಿಗ್ಗೆ ಏನೂ ಕೆಲಸವಿಲ್ಲ. ನಿಮಗೆ ಬಿಡುವಿದೆಯಾದರೆ ಕೆಲಸವನ್ನು ಈಗಲೇ ಪ್ರಾರಂಭಿಸುವಿರಾ?

ಆನಂದ (ಯೋಚನೆಯಲ್ಲಿ ಮಗ್ನನಾಗಿದ್ದವನು ಫಕ್ಕನೆ ಎಚ್ಚರಕ್ಕೆ ಬಂದವನಂತೆ): ಕೆಲಸ?

ಭಾಗಮ್ಮ: ಹೌದು, ಚಿತ್ರದ ಕೆಲಸ.

ಆನಂದ: ಎಂತಹ ಚಿತ್ರ?

ಭಾಗಮ್ಮ: ಶಾಂತೆಯ ಚಿತ್ರ.

ಆನಂದ: ಶಾಂತೆಯ ಚಿತ್ರವನ್ನು ಬಿಡಿಸಬೇಕೆ?

ಭಾಗಮ್ಮ: ಹೌದು, ನೀವು ನಿನ್ನೆ ಹೇಳಿದ್ದಿರಲ್ಲ!

ಆನಂದ: ಹೇಳಿದ್ದೆನೋ? ಇರಬಹುದು. ರೂಪಾಯಿ ತಂದಿರುವಿರಾ, ನೂರು ರೂಪಾಯಿ?

ಭಾಗಮ್ಮ: ನೂರು ರೂಪಾಯಿ! ಏಕೆ?

ಆನಂದ: ಚಿತ್ರಮಾಡಲು ಹಣವನ್ನು ಮುಂಗಡಪಡೆಯುವುದೇ ನನ್ನ ರೂಢಿ.

ಭಾಗಮ್ಮ: ಆದರೆ, ನಿನ್ನೆ ನೀವು ಅದನ್ನು ಧರ್ಮಾರ್ಥವಾಗಿಯೇ ಮಾಡುವೆನೆಂದಿದ್ದಿರಿ!

ಆನಂದ: ಒಳ್ಳೆಯದು, ಇರಬಹುದು. ಆದರೆ ತಮಾಷೆಗೆ ಹೇಳಿದ್ದನ್ನು ನೀವು ಹೆಂಗಸರೆಲ್ಲಾ ನಿಜವೆಂದೇ ನಂಬಬಹುದೇ? ಅದೂ ಅಲ್ಲದೆ, ಸ್ವಲ್ಪವೂ ಸುರೂಪವಿಲ್ಲದ, ಈ ಹುಡುಗಿಯ ತೈಲಚಿತ್ರವನ್ನು ಬಿಡಿಸಲು ನೀವು ಏಕೆ ಆತುರಪಡುವಿರೋ ದೇವರೇ ಬಲ್ಲ; ಇವಳ ಮುಖವು ತೆಳ್ಳಗಿದ್ದು ಚಪ್ಪಟೆಯಾಗಿದೆ; ಕಣ್ಣುಗಳಲ್ಲಿ ಬುದ್ಧಿಚಾತುರ್ಯದ ಕಿಡಿಯೇ ಹೊಳೆಯುತ್ತಿಲ್ಲ; ಕಿವಿಗಳು ಎತ್ತರವಾಗಿದ್ದು ಗಲ್ಲಗಳು ಬತ್ತಿಹೋಗಿವೆ! ನೀವು ನನ್ನನ್ನು ವಚನಪಾಲನೆಗಾಗಿ ಒತ್ತಾಯಮಾಡುವಿರಾದರೆ, ನನಗೆ ಇವಳ ಮುಂದೆ ಕುಳಿತು ಇವಳನ್ನು ದಿಟ್ಟಿಸುವುದರಿಂದ ಆಗಬಹುದಾದ ನೈತಿಕ ಮತ್ತು ಬೌದ್ಧಿಕ ಹಾನಿನಷ್ಟಗಳಿಗಾಗಿ ಇನ್ನೂ ಹೆಚ್ಚಿನ ಪರಿಹಾರದ್ರವ್ಯ ಕೊಡಬೇಕಾದೀತು, ನೆನಪಿರಲಿ!

(ಮಾತಾಡುತ್ತಾ ಒಂದು ಚುಟ್ಟಕ್ಕಾಗಿ ಮೇಜಿನ ಒಳಗೆ ಹೊರಗೆಲ್ಲಾ ಹುಡುಕಾಡುವನು.)

ಭಾಗಮ್ಮ: (ಬೆಪ್ಪಾಗಿ ಮಂಕುಬಡಿದು): ಏನು? (ಎನ್ನುತ್ತ ಅಲ್ಲೇ ಹತ್ತಿರವಿರುವ ಕುರ್ಚಿಯಲ್ಲಿ ಹೋಗಿ ಕುಳಿತು ಪ್ರಜ್ಞೆ ತಪ್ಪಿ ತಿರುಗಿ ಪ್ರಜ್ಞೆಗೆ ಬರುವಳು.)

ಆನಂದ (ಕಪಾಟಿನೊಳಗೆಲ್ಲಾ ಚುಟ್ಟದ ಬೇಟೆಯಾಡಿ ಸೋತು): ನನ್ನ ಯಥಾರ್ಥವಾದ ಈ ಮಾತುಗಳಿಂದ ನಿಮಗೆ ಮನ ನೊಂದಿರುವುದಾದರೆ ನಾನು ವ್ಯಸನಪಡುವೆನು. ಆದರೆ, ಈ ಮಾನವವರ್ಗದಿಂದಲೇ ನನಗೆ 'ಹರಹರಾ!' ಎನಿಸಿದೆ. ಅದರಲ್ಲಿಯೂ ನಿಮ್ಮ ಮನೆತನವು ಈ ಮಾನವಕೋಟಿಗೆಲ್ಲಾ ಕಲಂಕಪ್ರಾಯವಾಗಿದೆ. ನನಗೆ ಬೇಕಾದುದೇ ಅದರ ರಕ್ತವು! ದಾಮು ಸ್ವಲ್ಪದರಲ್ಲೇ ತಪ್ಪಿಸಿಕೊಂಡನು. ಆದರೆ ಮಾಧೂನ ವಿಷಯದಲ್ಲಾದರೆ ನನ್ನ ಅದೃಷ್ಟವು ಚೆನ್ನಾಗಿತ್ತು: ಅವನಿಗೆ ಅತ್ಯಂತ ರುಚಿಕರ ಲತ್ತೆ ಕೊಟ್ಟುಬಿಟ್ಟೆ! ಫಿರಂಗಿಯಲ್ಲಿ ಹಾಕಿ ಸಿಡಿಸಿದ್ದರೂ ಅವನು ಅಷ್ಟು ವೇಗವಾಗಿ ಹಾರುತ್ತಿದ್ದಿಲ್ಲ! ಬಹುಶಃ ಅವನು ನಿಮ್ಮನ್ನು ಮೆಟ್ಟಿಲಿನಲ್ಲಿ ಹಾದುಹೋಗಿರಬಹುದಲ್ಲವೇ?

ಶಾಂತೆ: ಹಾಗಾದರೆ, ನಮ್ಮನ್ನು ಹಾದುಹೋದದ್ದು ಮಾಧೂ ಅಣ್ಣನೇ?

ಭಾಗಮ್ಮ (ಎದ್ದು ನಿಂತು): ನೀವು ನನ್ನ ಮುದ್ದುವನ್ನು ಒದ್ದಿರಾ?

ಆನಂದ: (ವಿನೀತನಾಗಿ): ವಾರಗಟ್ಟಳೆ ಅಭ್ಯಾಸಮಾಡಿದಷ್ಟು ಚುರುಕಿನಿಂದ ಸೊಂಟದ ಮೇಲೆಯೇ ಒದ್ದೆನಮ್ಮ!

ಭಾಗಮ್ಮ: ಅಯ್ಯೋ, ನನ್ನ ಬಡ ಕಂದಾ! (ಎನ್ನುತ್ತಾ ಮಗನ ದೇಹಾವಶಿಷ್ಟವನ್ನು ಹುಡುಕಿಕೊಂಡು ಮೆಟ್ಟಿಲ ಬಳಿಗೆ ಓಡಿಹೋಗುವಳು.)

ಶಾಂತೆ(ಕಣ್ಣುಗಳನ್ನು ವಿಶಾಲವಾಗಿ ತೆರೆದು): ನೀವು ಇಷ್ಟು ದೊಡ್ಡ ವಾಗ್ಮಿಯಾಗಿದ್ದೀರೆಂದು ನಾನೆಂದೂ ಎಣಿಸಿರಲಿಲ್ಲ! ನನ್ನ ವರ್ಣನೆಯನ್ನು ಎಷ್ಟು ರಂಜಿತವಾಗಿ ಮಾಡಿದಿರಿ! ಅದೊಂದು ಗದ್ಯಕವಿತೆಯೇ ಸರಿ!

ಆನಂದ: ಸರಿ, ಸರಿ.

ಶಾಂತೆ: ನೀವು ನಿಜವಾಗಿಯೂ ನಾನು ಹಾಗಿರುವೆನೆಂದು ಭಾವಿಸುವಿರಾ?

ಆನಂದ: ನಿಜವಾಗಿ.

ಶಾಂತೆ: ನನ್ನ ಕಣ್ಣುಗಳು......................?

ಆನಂದ: ನೀಲಿ ಚಿಪ್ಪುಗಳಂತೆ.

ಶಾಂತೆ: ನೀವು ನಿಜವಾಗಿಯೂ ನನ್ನ ರೂಪವನ್ನು ಮೆಚ್ಚುವುದಿಲ್ಲವೇ?

ಆನಂದ: ಮೆಚ್ಚುವಲ್ಲಿಂದ ಬಹುದೂರ.

ಶಾಂತೆ: ಹಾಗಾದರೆ... ....(ಎನ್ನುತ್ತ ಮೆಲ್ಲಗೆ ಬಡಬಡಿಸುತ್ತಿರುವಳು)

ಆನಂದ (ಶಾಂತೆಯ ಮಾತುಗಳ ಕಡೆಗೆ ಗಮನಕೊಡದೆ ಕಪಾಟಿನ ಬಳಿ ಸಾರುತ್ತ ಸ್ವಗತ): ಸರಿ, ನೆನಪಾಯಿತು! ಕೆಲವು ದಿನಗಳ ಹಿಂದೆ ನಾನು ಅರೆ ಸೇದಿದ ಒಂದು ಚುಟ್ಟವನ್ನು ಈ ಕಪಾಟಿನ ಹಿಂದೆ ಎಸೆದುಬಿಟ್ಟಿದ್ದೆ! (ಅತ್ಯಪರಿಮಿತ ಅವಸರದಿಂದ ಕಪಾಟನ್ನು ಮುಂದಕ್ಕೆ ಎಳೆಯಲು ಆ ತುಂಡು ಅವನಿಗೆ ಸುಲಭವಾಗಿ ಕಾಣಸಿಕ್ಕುತ್ತದೆ. ಆದನ್ನು ಸಂತೋಷಾಧಿಕ್ಯದಿಂದ ಎತ್ತಿಕೊಂಡು) ಉಸ್ಸಪ್ಪ! ಬದುಕಿದೆ! ಇದರ ಕೊನೆಯು ಕಚ್ಚಿ ನಜ್ಜುಗುಜ್ಜಾಗಿದೆಯಾದರೂ, ಇದನ್ನು ಇಲಿಗಳು ಕಚ್ಚಿಕೊಚ್ಚಿವೆಯಾದರೂ, ಇದು ಸೇಕಡಾ ಎಂಟಂಶ ಕಾರ್ಬನ್ ಮೊನೊಕ್ಸಾಯಡ್ ಅನಿಲಪೂರಿತವಾಗಿ ಉಪಯೋಗಾರ್ಹವಾದ ಶುದ್ಧ ಚುಟ್ಟವೇ ಆಗಿದೆ!(ಕೂಡಲೇ ಆದನ್ನು ಬಾಯಯಿಲ್ಲಿಟ್ಟು ಬೆಂಕಿ ಹಚ್ಚಿ ಹೊಗೆಯನ್ನು ಬುಸಬುಸನೆ ಸೇದಿ ಹೊರಬಿಡಲಾರಂಭಿಸುವನು.) ಆಃ, ಎಂತಹ ಆನಂದ! ಪ್ರಪಂಚವು ನಿಜವಾಗಿಯೂ ಸ್ವರ್ಗವೇ ಆಗಿದೆ. ಇಲ್ಲಿ ನಾವು ಒಬ್ಬರ ಮೇಲೊಬ್ಬರು ಕರುಣೆ, ಪ್ರೀತಿ ಔದಾರ್ಯಗಳನ್ನು ತೋರಿಸಬೇಕಲ್ಲದೆ, ಸ್ವಲ್ಪವೂ ದ್ವೇಷ ಸಾಧಿಸಲೇ ಬಾರದು! (ಶಾಂತೆಯ ಕಡೆಗೆ ನೋಡುತ್ತ ಸ್ವಗತ:) ಎಲ! ಎಲ! ಇವಳ ಕಮಲದಳದಂತಹ ಕಣ್ಣುಗಳಲ್ಲಿ ಎಂತಹ ಕಾಂತಿ! ಇವಳ ಚಂದ್ರಮುಖದಲ್ಲಿ ಎಂತಹ ಸೌಂದರ್ಯ! ಛೆ! ಈ ಮೋಹಿನಿಯನ್ನು ಕುರಿತು ನನ್ನ ಅಭಿಪ್ರಾಯವು ಎಷ್ಟು ತಪ್ಪಾಗಿತ್ತು! ಇವಳು ಎಷ್ಟು ಮಾತ್ರಕ್ಕೂ ಮಾನವವರ್ಗದ ವ್ರಣವಾಗಿರದೆ ಎಂದಿನಂತೆಯೇ ಅತ್ಯಂತ ಲಾವಣ್ಯಮಯಿಯಾಗಿಯೇ ಇರುವಳಲ್ಲ!

ಶಾಂತೆ (ಯಾವುದೋ ಪ್ರಶ್ನೆಗೆ ಉತ್ತರ ಕಾಯುತ್ತಿದ್ದಂತೆ ಆನಂದನನ್ನೇ ನೋಡುತ್ತ): ಅಂ?

ಆನಂದ: ಕ್ಷಮಿಸು, ಏನೆಂದಿ?

ಶಾಂತೆ: ಹಾಗಾದರೆ, ನೀವು ನನ್ನನ್ನು............?

ಆನಂದ: ಏನು?

ಶಾಂತೆ (ತಡವರಿಸುತ್ತ): ಮ...ದು...ವೆ ಆಗುವುದಿಲ್ಲವೇ?

ಆನಂದ (ತಲೆತಿರುಗಿ ಹೋಲುವಂತಾಗಿ): ಯಾರು, ನಾನು? ನಿನ್ನನ್ನು ಮದುವೆಯಾಗುವುದು?

ಶಾಂತೆ: ಹೌದು.

ಆನಂದ: ಆದರೆ,—ನೀನು ನನ್ನನ್ನು ಬಯಸುವಿಯಾ?

ಶಾಂತೆ: ನಿಶ್ಚಯವಾಗಿ.

ಆನಂದ: ನಾನು ಇಷ್ಟೆಲ್ಲ ಹೇಳಿದ ಮೇಲೆ........?

ಶಾಂತೆ(ಆಶ್ಚರ್ಯದಿಂದ): ನಾನು ಹೇಳಿದ್ದು ಯಾವುದನ್ನೂ ನೀವು ಕೇಳಲಿಲ್ಲವೇ?

ಆನಂದ: ಇಲ್ಲ. ನಾನೇನೋ ಯೋಚನೆಯಲ್ಲಿದ್ದೆ. ನೀನೇನು ಹೇಳಿದಿ?

ಶಾಂತೆ: ನಾನು ಹಾಗಿರುವೆನೆಂದು ಅಭಿಪ್ರಾಯಪಡುವಿರಾಗಿ, ನೀವು ನನ್ನನ್ನು ರೂಪಕ್ಕಾಗಿ ಪ್ರೀತಿಸದೆ ಬುದ್ಧಿಚಾತುರ್ಯಕ್ಕಾಗಿಯೇ ಪ್ರೀತಿಸುತ್ತಿರುವಿರೆಂದು ಹೇಳಿದೆ. ನಾನು ಯಾವಾಗಲೂ ಹಾಗೆಯೇ ಆಶಿಸುತ್ತಿದ್ದೆ.

ಆನಂದ: ಆದಿರಲಿ. ನಿಶ್ಚಯವಾಗಿ ನನ್ನನ್ನು ವರಿಸುವಿಯಾ?

ಶಾಂತೆ: ನಿಶ್ಚಯವಾಗಿ! ಈ ಮೊದಲು ನೀವು ನನ್ನನ್ನು ಬರಿಯ ಬಣ್ಣದ ಬೀಸಣಿಗೆಯಂತೆ ಎಣಿಸಿದ್ದಿರೆಂದು ನಂಬಿದ್ದೆ.

ಆನಂದ: ಬಣ್ಣದ ಬೀಸಣಿಗೆ! (ತನ್ನ ಚುಟ್ಟವನ್ನು ಒಮ್ಮೆ ಬಿರುಸಾಗಿ ಸೇದಿ, ಮೇಜಿನ ಮೇಲಿರಿಸಿ) ಈ ಬುದ್ಧಿಚಾತುರ್ಯದ ಗಣಿಯನ್ನು ಬಣ್ಣದ ಬೀಸಣಿಗೆ ಎಂದೇನೇ?

ಶಾಂತೆ (ನಾಚುತ್ತ): ಅದೂ ಅಲ್ಲದೆ, ಅಣ್ಣ ಮಾಧೂನನ್ನು ಒಂದೇ ಒದೆತಕ್ಕೆ ಅಷ್ಟು ದೂರಕ್ಕೆ ಕಳುಹಬಲ್ಲವರನ್ನು ಯಾವಳಾದರೂ ಹೇಗೆ ಪ್ರೀತಿಸದಿದ್ದಾಳು?

ಆನಂದ (ಮುಖದಲ್ಲಿ ಕಳೆಗುಂದುತ್ತ): ಹೌದು, ನೆನಪಾಯಿತು. ನಾನು ನಿನಗೆ ಮಾಧೂನನ್ನು ನೆನಪಿಗೆ ತರುತ್ತೇನೆಂದು ನೀನು ದಾಮೂನೊಡನೆ ಹೇಳಿದ್ದಿಯಂತೆ!

ಶಾಂತೆ: ಆದರೆ, ನೀವಿಬ್ಬರೂ ಒಂದೇ ರೀತಿಯಲ್ಲಿ ಸದಾ ಸಿಳ್ಳು ಹಾಕುತ್ತಿರುವಿರೆಂಬುದಕ್ಕಾಗಿಯೇ ನಾನು ಹಾಗೆಂದಿದ್ದೆ. ನನಗೆ ಸಿಳ್ಳು ಕೇಳುವುದೆಂದರಾಗದು.

ಆನಂದ: ಇಗೋ, ಭಾಷೆ ಕೊಡುವೆನು; ಈಗಿನಿಂದ ನಾನು ಸಿಳ್ಳುಹಾಕುವುದೇ ಇಲ್ಲ. ಇನ್ನೊಂದು ವಿಷಯ: ನಾನು ನಿನಗೆ ದಾಮೂನ ನೆನಪು ಉಂಟುಮಾಡುತ್ತೇನೆಂದು ಮಾಧು ಕೇಳಿದನಲ್ಲ—ಅದೇಕೆ?

ಶಾಂತೆ: ಓ, ಅದು ಪೋಷಾಕಿನ ವಿಷಯದಲ್ಲಿ: ನೀವಿಬ್ಬರೂ ಒಂದೇ ತರನಾಗಿ, ಥಳಕಾಗಿ ವಿದೇಶೀ ಪೋಷಾಕು ಧರಿಸುವಿರಿ. ಅಷ್ಟೆ.

ಆನಂದ: ಅಷ್ಟೇ ತಾನೆ! [ಇನ್ನೊಂದು ಸಲ ಚುಟ್ಟವನ್ನು ಮೇಜಿನ ಮೇಲಿರಿಸಿ ಶಾಂತೆಯ ಕೈಗಳನ್ನು ತನ್ನ ಕೈಗಳಲ್ಲಿ ಎತ್ತಿಕೊಳ್ಳುತ್ತ] ಇಗೋ, ಇಂದಿನಿಂದಲೇ ನಿನಗೆ ಮೆಚ್ಚುಗೆಯಾಗುವ ರೀತಿಯ ಪೋಷಾಕನ್ನೇ ಧರಿಸುವೆನೆಂದು ಪ್ರತಿಜ್ಞೆ ಮಾಡಿಹೇಳುವೆನು ನಾನೆಣಿಸಿದ್ದೆ, ನಾನು ಅವರಿಬ್ಬರಂತೆ ಚುಟ್ಟವನ್ನು ಸೇದುತಿದ್ದುದಕ್ಕಾಗಿಯೇ ನೀನು ನನ್ನನ್ನು ಉಪೇಕ್ಷಿಸುತ್ತಿದ್ದಿಯೆಂದು! ಚುಟ್ಟದ ಮೇಲಿನ ನನ್ನ ಪ್ರೀತಿಯು ಅಪಾರ! ಆದರೂ ನಿನ್ನ ಮೇಲಿನ ನನ್ನ ಪ್ರೀತಿಯು ಅದಕ್ಕಿಂತಲೂ ಸಹಸ್ರ ಪಾಲು ಅಧಿಕ! ಆದುದರಿಂದ ನಿನ್ನನ್ನು ಒಲಿಸಿಕೊಳ್ಳುವ ಸಲುವಾಗಿ ನಾನು ಮೂರು ದಿನಗಳ ಹಿಂದೆ ನನ್ನ ಅಕ್ಕರೆಯ ಚುಟ್ಟವನ್ನು ದೃಢ ನಿರ್ಧಾರಮಾಡಿ ಬಿಟ್ಟುಬಿಟ್ಟೆ. ಆದರೆ, ಅದರಿಂದ ನಾನು ಪಟ್ಟ ಯಾತನೆ ನರಕಯಾತನೆಗೂ ಕಡೆ! ಹೊಗೆಬತ್ತಿ ಸೇದುವ ಚಟವು ನಿಜವಾಗಿಯೂ ಎಂತಹ ದುರಭ್ಯಾಸವೆಂಬುದು ಈಗತಾನೇ ನನಗೆ ಮನದಟ್ಟಾಗುತ್ತಿದೆ. ಒಬ್ಬನು ಕುಡಿ ವನ್ನಾದರೂ ಕಾರಣಾಂತರಗಳಿಂದ ಬಿಟ್ಟುಬಿಡಬಹುದು; ಆದರೆ ಈ ಚಟವನ್ನು ಬಿಡುವುದು ಮಸಣದಲ್ಲೇ ಎಂಬುದಕ್ಕೆ ಅನುಮಾನಬೇಡ. ಈ ಅಭ್ಯಾಸವಿದ್ದವರು ಕ್ರಮೇಣ ಆರೋಗ್ಯವನ್ನು ಕಳೆದುಕೊಳ್ಳಬಹುದ; ಆದರೆ ಇದ್ದ ಅಭ್ಯಾಸ ಬಿಟ್ಟವನು ಬುದ್ಧಿಯನ್ನೇ ಕಳೆದುಕೊಂಡು ರಾಕ್ಷಸನಿಗಿಂತಲೂ ಕ್ರೂರನಾಗುವನೆಂಬುವಕ್ಕೆ ನನ್ನ ದೃಷ್ಟಾಂತವೇ ಸಾಕು! ಇದನ್ನು ಲಕ್ಷಿಸಿ ಯಾರೂ ಈ ಅತ್ಯಂತ ನೀಚ ಅಭ್ಯಾಸಕ್ಕೆ ಕೈ ಹಾಕದಿರಲಿ!

[ಪರದೆ]

[ವೋಡ್‌ಹೌಸರ ಒಂದು ಕಥೆಯ ಆಧಾರದಿಂದ]

ESTD: 1935 **ಪ್ರಭಾತ** ಸ್ಥಾಪಿತ: 1935

ಸಚಿತ್ರ ಕನ್ನಡ ವಾರಪತ್ರಿಕೆ.

ದೇಶ ವಿದೇಶಗಳ ವಾರ್ತೆಗಳು, ಮಕ್ಕಳ ಪುಟ, ಸಿನೆಮಾ ವಿಭಾಗ, ವಾರದ ಭವಿಷ್ಯ, ವಾರದ ಕತೆ, ಜಿಲ್ಲಾ ವರ್ತಮಾನ, ಇತ್ಯಾದಿ, ಇತ್ಯಾದಿ.

ಬಿಡಿಪ್ರತಿ: ಎರಡಾಣೆ. ★ ವಾರ್ಷಿಕ ಚಂದಾ: ರೂ. 6-12-0

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು.

ಸಸ್ಯಜಗತ್ತಿನಲ್ಲಿ!

ಸದಾ ಶಾಂತ, ರಮ್ಯ ಹಸುರು, ಕಣ್ಣಿಗೆ ತಂಪು—ಆದರೆ, ಸದಾ ಚೈತನ್ಯ ತುಂಬಿಕೊಂಡಿದೆ,—ಇದುವೇ ಸಸ್ಯಜಗತ್ತು. ಇಲ್ಲೇ ನೈಸರ್ಗಿಕ ಸೌಂದರ್ಯದ ಪರಾಕಾಷ್ಠೆ.

ಸಸ್ಯ ಜಗತ್ತಿನಲ್ಲಿ, ಉಳಿಕೆಯ ಗುಣವೇ ಪ್ರಧಾನವಾಗಿದೆ. ಬೀಜಗಳಲ್ಲಿ, ಫಲಗಳಲ್ಲಿ, ಕಾಂಡದಲ್ಲಿ, ಬೇರಿನಲ್ಲಿ ಸಸ್ಯಗಳು ಆಹಾರ ಕೂಡಿಡಲಾರವಾದರೆ, ಚತುಷ್ಪಾದ ಪ್ರಾಣಿಗಳಾಗಲಿ ಮನುಷ್ಯರಾಗಲಿ ಬದುಕುವುದೇ ಸಾಧ್ಯವಾಗದು.

ಬಟಾಟೆಯೂ ಮರಗೆಣಸೂ ನೆಲದಡಿಯ ಕಾಂಡದಲ್ಲಿ ತಮ್ಮ ಆಹಾರವನ್ನು ಸಂಗ್ರಹಿಸುವುವು. ಮರುವರ್ಷ, ಮರಿಸಸ್ಯಗಳು ಅವುಗಳ ಕಾಂಡಗಳಿಂದ ಉಳಿಕೆಯ ಆಹಾರ ಪಡೆದು ಬೆಳೆಯುವುವು.



ತೆಂಗಿನ ಕಾಯಿಯಲ್ಲಿ ಈ ಆಹಾರವು ತಿರುಳಿನಲ್ಲಿ ಕೂಡಿಡಲ್ಪಟ್ಟಿದೆ. ಅಲ್ಲಿಂದಲೇ ತೆಂಗಿನ ಹೊಸ ಮೊಳಕೆಗೆ ಆಹಾರ ದೊರೆಯುತ್ತದೆ; ಅದರ ರಕ್ಷಣೆಯೂ ಆಗುತ್ತದೆ.

ಉಳಿಸುವ ಉಪಾಯವು ಉಳಿಯುವ ಉಪಾಯವಾಗಿದೆ.

ನಿಮ್ಮ ಹಣವನ್ನು ಸಿಂಡಿಕೇಟ್ ಬೇಂಕಿನ
'ಪಿಗ್ಮಿ' ಠೇವಣಾತಿಯಲ್ಲಿರಿಸಿ, ಉಳಿಸಿ, ಬೆಳೆಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.,
ಹೆಡ್ ಆಫೀಸು: ಉಡುಪಿ—
ಅಥವಾ ನಿಮ್ಮೂರಲ್ಲಿರುವ ಶಾಖೆಗಳಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE, LTD.

Edited, Printed and Published by K. V. Shenoy
at The Prabhat Printers, Ltd., Mangalore-1.